ಸಂಪುಟ 01 । ಸಂಚಿಕೆ 97 । ಭಾನುವಾರ 22 ಫೆಬ್ರವರಿ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ವಿಶ್ವ ಚಿಂತನಾ ದಿನ**

ವಿಶ್ವ ಚಿಂತನಾ ದಿನವನ್ನು ಚಿಂತನಾ ದಿನ ಎಂದೂ ಕರೆಯುತ್ತಾರೆ ಮತ್ತು ಇದನ್ನು ವಾರ್ಷಿಕವಾಗಿ ಫೆಬ್ರವರಿ 22 ರಂದು 150 ದೇಶಗಳಲ್ಲಿ ಗರ್ಲ್ ಸ್ಕೌಟ್ಸ್ ಮತ್ತು ಗರ್ಲ್ ಗೈಡ್‌ಗಳು ಆಚರಿಸುತ್ತವೆ.

**2) ರಾಷ್ಟ್ರೀಯ ಸೂಪರ್‌ಮಾರ್ಕೆಟ್ ಉದ್ಯೋಗಿ ದಿನ**

ಸೂಪರ್‌ಮಾರ್ಕೆಟ್ ಉದ್ಯೋಗಿಗಳು ನಮ್ಮ ಪೂರೈಕೆ ಸರಪಳಿ ಮತ್ತು ಸಮುದಾಯದ ಪ್ರಮುಖ ಅಂಶವಾಗಿದೆ. ಅದಕ್ಕಾಗಿಯೇ ಫೆಬ್ರವರಿ 22 ರಂದು ಸೂಪರ್‌ಮಾರ್ಕೆಟ್ ಉದ್ಯೋಗಿಗಳ ದಿನವು ಆಹಾರ ಉದ್ಯಮವು ಪ್ರತಿಯೊಂದು ಹಂತದ ಉದ್ಯೋಗಿಗಳನ್ನು ಗುರುತಿಸುವ ಸಮಯವಾಗಿದೆ.

## ಸುಭಾಷಿತ

ಸತ್ಯಕ್ಕೆ ಅಲಂಕಾರ ಬೇಕಿಲ್ಲ; ಅದು ನಗ್ನವಾಗಿಯೇ ಸುಂದರ.ಅಹಂಕಾರ ಕರಗಿದ ದಿನವೇ ಆತ್ಮಕ್ಕೆ ಸ್ವಾತಂತ್ರ್ಯ ಸಿಗುತ್ತದೆ.

ಶ್ರೀ ಸಿದ್ದೇಶ್ವರ ಸ್ವಾಮೀಜಿ

## ಬಳಗಾನೂರು ಪಟ್ಟಣದ ಶ್ರೀ ಬಸವೇಶ್ವರ ಪ್ರೌಢಶಾಲೆ ವತಿಯಿಂದ ಇಂಡಿಯಾ ಬುಕ್ ಆಫ್ ರೆಕಾರ್ಡ್‌ಗೆ ಆಯ್ಕೆಯಾದ ಬಾಲ ಪ್ರತಿಭೆ ಪ್ರೀತಮ್ ತಳವಾರ ಅವರಿಗೆ ಗೌರವ ಸನ್ಮಾನ

**ಬಳಗಾನೂರ: ಪಟ್ಟಣದ ಶ್ರೀ ಬಸವೇಶ್ವರ ಪ್ರೌಢಶಾಲೆ ಹಾಗೂ ಬಸವೇಶ್ವರ ಪದವಿ ಕಾಲೇಜಿನ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದ ಅಂಗವಾಗಿ ಈ ವಿಶೇಷ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಬಳಗಾನೂರು ಪಟ್ಟಣದ ಶ್ರೀದೇವಿ ಕಿರಿಯ ಪ್ರಾಥಮಿಕ ಶಾಲೆಯ ಯುಕೆ–ಜಿಯ 5 ವರ್ಷದ ವಿದ್ಯಾರ್ಥಿ ಪ್ರೀತಮ್ ತಂ/ ಸಗರಪ್ಪ ತಳವಾರ ಅವರು 2026ರ India Book of Records ಗೆ ಆಯ್ಕೆಯಾಗಿರುವುದು ಹೆಮ್ಮೆಯ ಸಂಗತಿ. ಪ್ರೀತಮ್ ವಿವಿಧ ವಿಷಯಗಳಲ್ಲಿ ಅದ್ಭುತ ಸ್ಮರಣಾಶಕ್ತಿ ಪ್ರದರ್ಶಿಸಿದ್ದಾನೆ.**





ಪ್ರಪಂಚದ 90 ದೇಶಗಳ ರಾಜಧಾನಿಗಳು, ಭಾರತದ 36 ರಾಜ್ಯಗಳ ರಾಜಧಾನಿಗಳು, 25 ರಾಷ್ಟ್ರೀಯ ಚಿಹ್ನೆಗಳು, ನೋಬೆಲ್ ಪ್ರಶಸ್ತಿ ಹಾಗೂ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಮಹಾನ್ ಸಾಹಿತಿಗಳ ಹೆಸರುಗಳು, ವಿಶ್ವದ ಅದ್ಭುತಗಳು, ಸೌರಗ್ರಹಗಳು, ಖಂಡಗಳು, ಸಮುದ್ರ–ಸಾಗರಗಳು, ಕರ್ನಾಟಕದ ಕಂದಾಯ ವಿಭಾಗ, ವೇದಗಳು, ದಿಕ್ಕುಗಳು, ಕಾಲಗಳು, ಪಕ್ಷಗಳು, ತಿಂಗಳುಗಳು, ಕನ್ನಡ ವ್ಯಾಕರಣ, ಕಾಡುಪ್ರಾಣಿಗಳು, ಕ್ರೀಡೆಗಳ ಹೆಸರುಗಳು ಹಾಗೂ ವಿಶ್ವನಕ್ಷೆ ಗುರುತಿಸುವುದು ಸೇರಿದಂತೆ ಅನೇಕ ವಿಷಯಗಳನ್ನು ಲೀಲಾಜಾಲವಾಗಿ ಹೇಳುವ ಸಾಮರ್ಥ್ಯ ಹೊಂದಿದ್ದಾನೆ. ಫೆಬ್ರವರಿ 10 ರಂದು ಇಂಡಿಯಾ ಬುಕ್ ಆಫ್ ರೆಕಾರ್ಡ್‌ನಿಂದ ಆಯ್ಕೆ ಕು–ರಿತು ಮಾಹಿತಿ ಬಂದಿರುವುದಾಗಿ ತಾಯಿ ರೇಣುಕಾ ಸಗರಪ್ಪ ತಳವಾರ ತಿಳಿಸಿದ್ದಾರೆ.


ಕಾರ್ಯಕ್ರಮದಲ್ಲಿ ಮಾತನಾಡಿದ ಸಂಸ್ಥೆಯ ಅಧ್ಯಕ್ಷರು ಹಾಗೂ ಗಣ್ಯರು, "ಇಂತಹ ಬಾಲ ಪ್ರತಿಭೆಗಳು ನಮ್ಮ ಶಿಕ್ಷಣ ವ್ಯವಸ್ಥೆಯ ಗೌರವವನ್ನು ಹೆಚ್ಚಿಸುತ್ತವೆ. ಪೋಷಕರ ಪ್ರೋತ್ಸಾಹ ಮತ್ತು ಶಿಕ್ಷಕರ ಮಾರ್ಗದರ್ಶನ ಇದ್ದರೆ ಮಕ್ಕಳಲ್ಲಿ ಅಸಾಧ್ಯವೆನ್ನಿಸುವ ಸಾಧನೆಗಳೂ ಸಾಧ್ಯವಾಗುತ್ತವೆ" ಎಂದು ಅಭಿಪ್ರಾಯಪಟ್ಟರು. ಶಾಲೆಯ ಮುಖ್ಯೋಪಾಧ್ಯಾಯರು ಮಾತನಾಡಿ, "ಪ್ರೀತಮ್ ಅವರ ಸ್ಮರಣಾಶಕ್ತಿ ಹಾಗೂ ವೇದಿಕೆ ಮೇಲೆ ನಿರ್ಭೀತಿಯಾಗಿ ವಿಷಯಗಳನ್ನು ಹೇಳುವ ಶೈಲಿ ಎಲ್ಲರನ್ನು ಆಶ್ಚರ್ಯಚಕಿತರನ್ನಾಗಿಸಿದೆ. ಇಂತಹ ವಿದ್ಯಾರ್ಥಿಗಳು ನಮ್ಮ ಶಾಲೆಯ ಕೀರ್ತಿಯನ್ನು ರಾಷ್ಟ್ರಮಟ್ಟದಲ್ಲಿ ಬೆಳಗಿಸುತ್ತಿದ್ದಾರೆ" ಎಂದು ಸಂತಸ ವ್ಯಕ್ತಪಡಿಸಿದರು.

ಸನ್ಮಾನ ಕಾರ್ಯಕ್ರಮದಲ್ಲಿ ಪ್ರೀತಮ್ ಅವರಿಗೆ ಶಾಲು ಹೊದಿಸಿ, ಫಲಕ ನೀಡಿ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಅವರ ತಂದೆ ಸಗರಪ್ಪ ತಳವಾರ ಹಾಗೂ ತಾಯಿ ರೇಣುಕಾ ಅವರಿಗೆ ಸಹ ಸನ್ಮಾನಿಸಿ ಅಭಿನಂದಿಸಲಾಯಿತು. ಕುಟುಂಬಸ್ಥರು ಸಂಸ್ಥೆಯವರಿಗೆ ಕೃತಜ್ಞತೆ ಸಲ್ಲಿಸಿದರು. ಬಾಲ ವಯಸ್ಸಿನಲ್ಲೇ ರಾಷ್ಟ್ರೀಯ ಮಟ್ಟದ ಸಾಧನೆ ಮಾಡಿರುವ ಪ್ರೀತಮ್ ತಳವಾರ ಮುಂದಿನ ದಿನಗಳಲ್ಲಿ ಇನ್ನಷ್ಟು ಉನ್ನತ ಸಾಧನೆ ಮಾಡಿ ರಾಜ್ಯ ಹಾಗೂ ದೇಶಕ್ಕೆ ಕೀರ್ತಿ ತರುವಂತೆ ಎಲ್ಲರೂ ಹಾರೈಸಿದರು. ಈ ಬಾಲ ಪ್ರತಿಭೆಯ ಸಾಧನೆ ಬಳಗಾನೂರು ಹಾಗೂ ಸಮೀಪ ಪ್ರದೇಶದ ಜನರಿಗೆ ಹೆಮ್ಮೆಯ ವಿಷಯವಾಗಿದೆ.

## ತಾಲೂಕು ಆರೋಗ್ಯ ಅಧಿಕಾರಿಗಳಿಂದ ತುರ್ತು ಸ್ಪಂದನೆ ಬೆಳ್ಳಿಗನೂರ್ ಗ್ರಾಮಕ್ಕೆ ಅಧಿಕಾರಿಗಳ ಭೇಟಿ

ನೈಜ್ಯ ದೆಸೆ ನ್ಯೂಸ್

**ಡಾ. ಅಯ್ಯನಗೌಡ ತಾಲೂಕ ಆರೋಗ್ಯ ಅಧಿಕಾರಿಗಳು ಸಿಂಧನೂರ್ ಇವರು ಇಂದು ಮಸ್ಕಿ ತಾಲೂಕಿನ ಬೆಳ್ಳಿಗನೂರ್ ಗ್ರಾಮಕ್ಕೆ ಭೇಟಿ ನೀಡಿ ಸಾರ್ವಜನಿಕರ ಮನೆ ಮನೆ ಭೇಟಿ ನೀಡಿ ಆರೋಗ್ಯ ವಿಚಾರಿಸಲಾಯಿತು.**




ಹಾಗೂ ತುರ್ತು ಚಿಕಿತ್ಸಾ ಕೇಂದ್ರಗಳನ್ನು ಏರ್ಪಡಿಸಿ ಸಾರ್ವಜನಿಕರಿಗೆ ಆರೋಗ್ಯ ತಪಾಸಣೆ ಜೊತೆಗೆ ಆರೋಗ್ಯ ಶಿಕ್ಷಣ ಮಾಹಿತಿ ನೀಡಿ ನೀರಿನ ಮೂಲಗಳ ಪೈಪ್ ಲೈನ್ ದುರಸ್ತಿ ಕ್ರಮ ಕೈಗೊಳ್ಳಲು ಗ್ರಾಮ ಪಂಚಾಯಿತಿಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲಾಯಿತು ಮತ್ತು ಗ್ರಾಮದ ಜನರಿಗೆ ನೀರನ್ನು ಕುದಿಸಿ ಆರಿಸಿ ಕುಡಿಯಲು ಮತ್ತು ಬಿಸಿಯಾದ ಆಹಾರ ಸೇವನೆ ಮಾಡುವುದು ಡಂಗುರ ಮೂಲಕ ತಿಳಿಸಲಾಗಿದೆ. ಈ ಸಂದರ್ಭದಲ್ಲಿ ಗೀತಾ ಹಿರೇಮಠ ನಿಖಿಲ್ ಹೊಸ್ಮನಿ ಆಂಜನೇಯ ಗುರುನಾಥ್ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಗಳು, ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

## ನ್ಯೂನತೆಯುಳ್ಳ ಮಕ್ಕಳ ಆರೋಗ್ಯ ತಪಾಸಣೆ



ನೈಜ್ಯ ದೆಸೆ ನ್ಯೂಸ್

**ರಾಯಚೂರು: ಆರ್‌ಬಿಎಸ್‌ಕೆ ವೈದ್ಯಕೀಯ ತಂಡವು ಕ್ಷೇತ್ರ ಮಟ್ಟದಲ್ಲಿ ಗುರುತಿಸಿದ ನ್ಯೂನ್ಯತೆಯುಳ್ಳ ಮಕ್ಕಳ ಆರೋಗ್ಯ ತಪಾಸಣೆ ಶಿಬಿರ ಶುಕ್ರವಾರ ನಡೆಯಿತು. ನಗರದ ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ನಡೆದ ಶಿಬಿರದಲ್ಲಿ ಹುಟ್ಟಿನಿಂದ 18 ವರ್ಷದೊಳಗಿನ ಜನ್ಮಜಾತ ಹೃದಯ ಖಾಯಿಲೆಯ 14 ಮಕ್ಕಳು, ಸೀಳು ತುಟಿ, ಸೀಳು ಅಂಗಳದ 3 ಮಕ್ಕಳನ್ನು ಡಾ.ಇಮ್ರಾನ್ ತಪಾಸಣೆ ಮಾಡಿದರು.**

ಜಿಲ್ಲೆಯಲ್ಲಿ ಪ್ರಸ್ತುತ 12 ಆರ್‌ಬಿಎಸ್‌ಕೆ ವೈದ್ಯಕೀಯ ತಂಡಗಳ ಕಾರ್ಯನಿರ್ವಹಿಸುತ್ತಿದ್ದು, ಪ್ರತಿ ತಂಡದಲ್ಲಿ ವೈದ್ಯರು, ಶುಶ್ರೂಷಕರು, ನೇತ್ರಾಧಿಕಾರಿಗಳು ಇದ್ದಾರೆ. ಅಂಗನವಾಡಿ, ಶಾಲೆಗಳಲ್ಲಿ ತಪಾಸಣೆ ನಡೆಸಿ ರಾಯಚೂರಿನ ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ಮುಖ್ಯ ವೈದ್ಯಾಧಿಕಾರಿ ಡಾ.ಪ್ರಜ್ವಲಕುಮಾರ ನೇತೃತ್ವದಲ್ಲಿ ಪ್ರತಿ ಮಂಗಳವಾರ, ಶುಕ್ರವಾರ ಮಕ್ಕಳ ತಜ್ಞರಿಂದ ತಪಾಸಣೆ ಮಾಡುತ್ತಾರೆ. ಇದಕ್ಕೆ ನವೋದಯ ಹಾಗೂ ರಿಮ್ಸ್ ಆಸ್ಪತ್ರೆಯ ತಜ್ಞರು ಸಹಕಾರ ನೀಡಿದ್ದಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸುರೇಂದ್ರಬಾಬು ಮಾತನಾಡಿ, ಪಾಲಕರು ತಮ್ಮ ಮಗುವಿಗೆ ಆರೋಗ್ಯ ಸಮಸ್ಯೆಗಳಿಗೆ ಹಲವು ಬಾರಿ ಖಾಸಗಿ ಆಸ್ಪತ್ರೆಗಳಿಗೆ ತೆರಳಿ ಲಕ್ಷಾಂತರ ರೂಪಾಯಿ ವೆಚ್ಚ ಕರ್ಚು ಮಾಡಿ ಆರ್ಥಿಕ ತೊಂದರೆಗೊಳಗಾಗುವುದನ್ನು ತಪ್ಪಿಸಲು ಸರ್ಕಾರ ಅನುಷ್ಠಾನ ಮಾಡಿರುವ ಯೋಜನೆ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮವಾಗಿದೆ ಎಂದು ಹೇಳಿದರು.

ಜಿಲ್ಲಾ ಆರಂಭಿಕ ಮಧ್ಯಸ್ಥಿಕೆ ಕೇಂದ್ರ: ಮಕ್ಕಳ ಬೆಳವಣಿಗೆಗೆ ಕಾರಣವಾಗುವ ನಾಲ್ಕು ಕಾರಣಗಳನ್ನು ಗುರುತಿಸಿ ಮಕ್ಕಳ ತಜ್ಞರು, ಕಿವಿ, ಮೂಗು ಹಾಗೂ ಗಂಟಲು ತಜ್ಞರು, ಮಾನಸಿಕ ತಜ್ಞರು, ಫಿಜಿಯೊಥೆರಪಿಸ್ಟ್ ಅವರು ಅಗತ್ಯ ಚಿಕಿತ್ಸೆ, ಸಲಹೆಗಳನ್ನು ನೀಡುತ್ತಾರೆ. ಪ್ರಸ್ತುತ ಪ್ರತಿದಿನ 15 ರಿಂದ20 ಮಕ್ಕಳು ಕೇಂದ್ರದ ಸದುಪಯೋಗ ಪಡೆಯುತ್ತಿದ್ದಾರೆ ಎಂದು ಹೇಳಿದರು.

ಖಾಸಗಿ ಆಸ್ಪತ್ರೆಗಳಲ್ಲೂ ಚಿಕಿತ್ಸೆ: ಜನ್ಮಾಜಾತ ಹೃದಯ ಸಂಬಂಧಿ ಕಾಯಿಲೆಗಳ ತುರ್ತು ಶಸ್ತ್ರಚಿಕಿತ್ಸೆಗಳಿಗಾಗಿ ಸರ್ಕಾರದೊಂದಿಗೆ ಒಡಂಬಡಿಕೆ ಮಾಡಿಕೊಂಡು ಬೆಂಗಳೂರಿನ ಆಸ್ಪತ್ರೆಗಳಿಗೆ ಕಳುಹಿಸಲಾಗುತ್ತಿದೆ ಎಂದು ತಿಳಿಸಿದರು. ಆರ್‌ಸಿಎಚ್ ಅಧಿಕಾರಿ ಡಾ.ನಂದೀತಾ ಎಂ.ಎನ್. ಮಾತನಾಡಿದರು. ಡಾ.ಸಂಧ್ಯಾ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ, ಹಿರಿಯ ಶುಶ್ರೂಷಣಾಧಿಕಾರಿ ಸಲೋಮಿ, ಡಿವೈಎಚ್‌ಇಒ ಬಸಯ್ಯ, ಡಿಪಿಎಂ ನವೀನಕುಮಾರ, ಸಿದ್ದಮ್ಮ, ಬಿಎಚ್‌ಇಒ ಸರೋಜಾ ಕೆ, ಡಿಇಐಸಿ ತಂಡದ ಸಿಬ್ಬಂದಿ ಉಪಸ್ಥಿತರಿದ್ದರು.

## ದಕ್ಷಿಣ ಒಳನಾಡಿನಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ

ನೈಜ್ಯ ದೆಸೆ ನ್ಯೂಸ್

**ಕಳೆದ ಹಲವಾರು ದಿನಗಳಿಂದ ರಾಜ್ಯದ ಬಹುತೇಕ ಭಾಗಗಳಲ್ಲಿ ಒಣಹವೆಯೇ ಹರಿದಾಡುತ್ತಿದ್ದು, ಇಂದು ದಕ್ಷಿಣ ಒಳನಾಡಿನ ಕೆಲವು ಜಿಲ್ಲೆಗಳಲ್ಲಿ ಲಘು ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.**



ಚಾಮರಾಜನಗರ, ಕೊಡಗು, ಮೈಸೂರು, ಮಂಡ್ಯ ಜಿಲ್ಲೆಗಳಲ್ಲಿ ಗುಡುಗು ಸಹಿತ ಸಾಧಾರಣ ಮಳೆಯಾಗಬಹುದು. ದಕ್ಷಿಣ ಒಳನಾಡಿನ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೋಲಾರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಬಳ್ಳಾರಿ, ತುಮಕೂರು, ಚಿಕ್ಕಬಳ್ಳಾಪುರ, ರಾಮನಗರ, ಚಿತ್ರದುರ್ಗ, ದಾವಣಗೆರೆ ಮತ್ತು ವಿಜಯನಗರ ಜಿಲ್ಲೆಗಳಲ್ಲಿಯೂ ಒಣಹವೆಯೇ ಮುಂದುವರಿಯಲಿದೆ. ಉತ್ತರ ಒಳನಾಡು ಜಿಲ್ಲೆಗಳಾದ ಬೆಳಗಾವಿ, ಬೀದರ್, ವಿಜಯಪುರ, ಬಾಗಲಕೋಟೆ, ಹಾವೇರಿ, ಗದಗ, ಧಾರವಾಡ, ಕಲಬುರಗಿ, ಕೊಪ್ಪಳ, ಬಳ್ಳಾರಿ, ರಾಯಚೂರು, ಯಾದಗಿರಿ ಮತ್ತು ವಿಜಯನಗರದಲ್ಲೂ ಕಳೆದ ಕೆಲವು ದಿನಗಳಿಂದ ಒಣಹವೆಯೇ ಇರಲಿದೆ.

## ಮಡಿವಾಳಪ್ಪ ದೇಸಾಯಿ ದಂಪತಿಗಳಿಗೆ ಸನ್ಮಾನ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ತಾಲೂಕಿನ ಚಬನೂರ ಗ್ರಾಮದ ಕ್ರಾಸ್ ನಲ್ಲಿರುವ ಶ್ರೀ ತಾಯಮ್ಮ ಆಂಗ್ಲ ಮಾಧ್ಯಮ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ಸಂಸ್ಥೆಯ ಏಳಿಗೆಗಾಗಿ ಅನುಪಮ ಸೇವೆಯನ್ನು ಸಲ್ಲಿಸಿದ ಕಾರ್ಯದರ್ಶಿ ಮಡಿವಾಳಪ್ಪ ದೇಸಾಯಿ ಹಾಗೂ ಅವರ ಧರ್ಮಪತ್ನಿ ಶಿಕ್ಷಕಿ ಲಕ್ಷ್ಮಿ ಮಡಿವಾಳಪ್ಪ ದೇಸಾಯಿ ಇವರನ್ನು ಸಂಸ್ಥೆ ವತಿಯಿಂದ ಸನ್ಮಾನಿಸಿ ಗೌರವ ಸಮರ್ಪಣೆ ಸಲ್ಲಿಸಲಾಯಿತು.**




ಈ ಸಮಯದಲ್ಲಿ ಕೊಕಟನೂರಿನ ಪೂಜ್ಯ ಮಡಿವಾಳೇಶ್ವರ ಶಿವಾಚಾರ್ಯರು, ಕರಬಸಯ್ಯ ಸಿ. ಹಿರೇಮಠ, ಸಾಹಿತಿ ಅಶೋಕ ಹಂಚಲಿ, ಪಿಡಿಓ ಪರಶುರಾಮ ಕಸನಕ್ಕಿ, ಬಸಯ್ಯ ಹಿರೇಮಠ,ಹಣಮಂತ್ರಾಯ ಚೌದ್ರಿ, ಚಂದ್ರಶೇಖರ ಕನಕರೆಡ್ಡಿ, ರಾಮಲಿಂಗಪ್ಪ ಸಿ.ದೇಸಾಯಿ, ಪ್ರದೀಪ್ ಟಿ.ದೇಸಾಯಿ, ಸಿದ್ದಲಿಂಗ ಗುಂಡಾಪುರ, ವೆಂಕಟೇಶ ತಾಳಪಲ್ಲೆ,ಎಂ.ಡಿ.ಬಳಗಾರ, ರಾಮಚಂದ್ರಪ್ಪ ದೇಸಾಯಿ, ಮಶಾಕಸಾಬ ದೊಡಮನಿ, ಸಂಸ್ಥೆಯ ಅಧ್ಯಕ್ಷ ಶರಣಯ್ಯ ಹಿರೇಮಠ, ಉಪಾಧ್ಯಕ್ಷ ಶಶಿಧರ ಹಯ್ಯಾಳ, ಮುಖ್ಯ ಗುರುಗಳಾದ ಬಿ.ಎನ್.ಸಿದ್ದರೆಡ್ಡಿ ಆಡಳಿತ ಮಂಡಳಿ ನಿರ್ದೇಶಕರು, ಶಿಕ್ಷಕ ವರ್ಗ, ಪಾಲಕರು ಹಾಗೂ ವಿದ್ಯಾರ್ಥಿಗಳು ಇದ್ದರು.

## ಅಮರಗೋಳದಲ್ಲಿ ಜನಾಬ್ ಮಲಕಸಾಬ್ ಮಾಸ್ತರರ 9ನೇ ವರ್ಷದ ಪುಣ್ಯಸ್ಮರಣೋತ್ಸವ

ನೈಜ್ಯ ದೆಸೆ ನ್ಯೂಸ್

**ಮುದ್ದೇಬಿಹಾಳ: ತಾಲೂಕಿನ ಅಮರಗೋಳ ಗ್ರಾಮದಲ್ಲಿ ದಿವಂಗತ ಸಾಹಿತಿ ಜನಾಬ್ ಮಲಕಸಾಬ್ ಮಾಸ್ತರರ 9ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ರವಿವಾರ ಬೆಳಿಗ್ಗೆ 11 ಗಂಟೆಗೆ ಶ್ರೀ ನಾಗಲಿಂಗೇಶ್ವರ ದೇವಸ್ಥಾನದಲ್ಲಿ ಭವ್ಯ ಸಮಾರಂಭ ನಡೆಯಲಿದೆ. ಭಾವೈಕ್ಯ ಸಾಹಿತ್ಯ ವೇದಿಕೆ, ಅಮರಗೋಳ ಹಾಗೂ ಡಾ? ಸಿಂಪಿ ಲಿಂಗಣ್ಣ ಸಾಹಿತ್ಯ ವೇದಿಕೆ (ರಿ), ಕನ್ನಡ ಸಾಹಿತ್ಯ ಪರಿಷತ್, ಶರಣ ಸಾಹಿತ್ಯ ಪರಿಷತ್, ವಚನ ಸಾಹಿತ್ಯ ಹಾಗೂ ಸಾಂಸ್ಕೃತಿಕ ಪರಿಷತ್ತು, ಜಾನಪದ ಸಾಹಿತ್ಯ ಪರಿಷತ್ತು ಮುದ್ದೇಬಿಹಾಳ ಮತ್ತು ಸಮಸ್ತ ಅಮರಗೋಳ ಗ್ರಾಮಸ್ಥರ ಸಹಯೋಗದಲ್ಲಿ ಈ ಸಮಾರಂಭವನ್ನು ಆಯೋಜಿಸಲಾಗಿದೆ.**

ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯವನ್ನು ಪೂಜ್ಯ ಶ್ರೀ ಮಹಾದೇವಯ್ಯ ಹಿರೇಮಠ ಶಾಸ್ತ್ರಿಗಳು ಉದ್ಘಾಟಿಸಲಿದ್ದು, ಇಲಕಲ್ಲದ ಅರಬಿಕ್ ಮಹಾವಿದ್ಯಾಲಯದ ಉಪನ್ಯಾಸಕರಾದ ಶ್ರೀ ಲಾಲಹುಸೇನ ಕಂದಗಲ್ಲ ಅವರು ವಿಶೇಷ ಭಾಷಣ ಮಾಡಲಿದ್ದಾರೆ. ಅಧ್ಯಕ್ಷತೆಯನ್ನು ಹಿರಿಯ ಸಾಹಿತಿಗಳಾದ ಶ್ರೀ ಬಿ. ಎಂ. ಹಿರೇಮಠ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶ್ರೀ ಪ್ರಕಾಶ ನರಗುಂದ ,ಅಬ್ದುಲ್‌ರಹೆಮಾನಸಾಬ ಬಿದರಕುಂದಿ ಸೇ–ರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ. ಮೌಲಾನ ಮಹ್ಮದರಫೀಕ ಕಮಲದಿನ್ನಿ ಅವರು ಕುರ್‌ಆನ್ ಪಠಣ ನೆರವೇರಿಸಲಿದ್ದಾರೆ.

ಈ ಸಂದರ್ಭದಲ್ಲಿ ಸಾಹಿತ್ಯ ರತ್ನ ಪ್ರಶಸ್ತಿ ಹಾಗೂ "ಉತ್ತಮ ಶಿಕ್ಷಕ ಪ್ರಶಸ್ತಿ ಗಳನ್ನು ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಸಾಧಕರಿಗೆ ಹಾಗೂ ನಿವೃತ್ತ ಶಿಕ್ಷಕರಿಗೆ ಪ್ರದಾನ ಮಾಡಲಾಗುತ್ತದೆ.



ಸಾಹಿತ್ಯ ರತ್ನ ಪ್ರಶಸ್ತಿಗೆ ಮುರ್ತುಜಾಬೇಗಂ ಕೊಡಗಲಿ ಅವರನ್ನು ಆಯ್ಕೆ ಮಾಡಲಾಗಿದೆ. ಉತ್ತಮ ಶಿಕ್ಷಕ ಪ್ರಶಸ್ತಿಗೆ ಅಕ್ಕಮಹಾದೇವಿ ಹಗರಟಗಿ, ಗಂಗಾಬಾಯಿ ಬಿ. ಬಿರಾದಾರ, ಶಾಂತಾಬಾಯಿ ಡಿ. ಪಣಿದಕಟ್ಟಿ, ಮಮತಾಜಬೇಗಂ ಹೊನವಾಡ, ಮುನಿರಾಬೇಗಂ ಎಂ. ಇಸ್ಲಾಂಪುರ, ಶಾಂತಾ ಬಿ. ಅಂಬಿಗೇರ, ಸುವರ್ಣಾ ಎಸ್. ಕಂಠಿ, ಬಸವಂತಪ್ಪ ವಾಯ್. ನಾಟಕರ, ರಾಜೇಸಾಬ ಹಿರೇಮನಿ, ಅವ್ವಣ್ಣ ಎಂ. ಬಡಿಗೇರ, ಹಬೀಬುಲ್ಲಾ. ಕೆಂಭಾವಿ ಮೋಹನಬಾಬು ಎಸ್. ಅವರನ್ನು ಆಯ್ಕೆ ಮಾಡಲಾಗಿದೆ.

ಇದಲ್ಲದೆ ಕನ್ನಡ ಪರ ಹೋರಾಟಗಾರರಾದ ಶ್ರೀ ಕಿರಣ ಪಾಟೀಲ, ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ಬಿ. ಟಿ. ವಜ್ಜಲ, ಎಂ. ಜಿ. ವಾಲಿ, ಎಸ್. ಟಿ. ಪಾಟೀಲ ಸೇರಿದಂತೆ ಹಲವಾರು ಗಣ್ಯರನ್ನು ಸಾಧಕರಾಗಿ ಸನ್ಮಾನಿಸಲಾಗುತ್ತದೆ. ನಿವೃತ್ತ ಶಿಕ್ಷಕರಾದ ಜಿ. ಎನ್. ಪಂಪಣ್ಣ, ಎಚ್. ಡಿ. ಆಲೂರ, ಮುತ್ತು ಟಕ್ಕಳಕಿ, ಎಸ್. ವಿ. ಹಿರೇಮಠ ಸೇರಿದಂತೆ ಹಲವ–ರಿಗೆ ವಿಶೇಷ ಗೌರವ ಸಮರ್ಪಿಸಲಾಗುತ್ತದೆ. ಕಾರ್ಯಕ್ರಮದಲ್ಲಿ ಪ್ರಾಚಾರ್ಯರಾದ ಎಸ್. ಕೆ. ಹಡಲಗೇರಿ ಸೇರಿದಂತೆ ವಿವಿಧ ಶಿಕ್ಷಣ–ತಜ್ಞರು, ಸಮಾಜ ಸೇವಕರು, ಬ್ಯಾಂಕ್ ಹಾಗೂ ಗ್ರಾಮ ಪಂಚಾಯಿತಿ ಪ್ರತಿನಿಧಿಗಳು ಉಪಸ್ಥಿತರಿರಲಿದ್ದಾರೆ. ಸಂಗೀತ ಸೇವೆಯನ್ನು ಸಂಗಮೇಶ ಶಿವಣಗಿ ಹಾಗೂ ಸಂಗಡಿಗರು ನೆರವೇರಿಸಲಿದ್ದು, ವಂದನಾರ್ಪಣೆಯನ್ನು ಟಿ. ಎನ್. ರೂಡಗಿ ಸಲ್ಲಿಸಲಿದ್ದಾರೆ. ದಿವಂಗತ ಮಲಕಸಾಬ್ ಮಾಸ್ತರರ ಸಾಹಿತ್ಯ ಹಾಗೂ ಶೈಕ್ಷಣಿಕ ಸೇವೆಯನ್ನು ಸ್ಮರಿಸುವ ಈ ಸಮಾರಂಭಕ್ಕೆ ತಾಲೂಕಿನ ಸಾಹಿತ್ಯಾಸಕ್ತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಆಯೋಜಕರು ಮನವಿ ಮಾಡಿದ್ದಾರೆ.

## ಸಾಹಿತ್ಯ ಸಿಂಚನ

ಸ್ನೇಹವೆ ಜೀವನದ ಸಿರಿ,
ದುಃಖದಲ್ಲಿ ಜೊತೆ ನಿಲ್ಲುವ ಗಿರಿ.
ನಗು ಹಂಚಿ ನೋವು ಕಳೆದು,
ಹೃದಯಗಳನ್ನು ಹತ್ತಿರ ಮಾಡು.
ನಿಜ ಸ್ನೇಹ ಸಿಗುವುದು ಭಾಗ್ಯ,
ಅದು ಜೀವನದ ಸಾರ್ಥಕ್ಯ.
ಕಷ್ಟದ ಹೊತ್ತಲ್ಲಿ ಕೈ ಹಿಡಿದು,
ಕಣ್ಣೀರನ್ನು ಮುತ್ತಾಗಿ ತೊಳೆದು.
ಮೌನದಲ್ಲೂ ಮನದ ಮಾತು ತಿಳಿದು,
ನೆರಳಾಗಿ ಹಿಂಬಾಲಿಸುವುದು.
ಸ್ವಾರ್ಥವಿಲ್ಲದ ಸುವರ್ಣ ಬಾಂಧವ್ಯ,
ಸ್ನೇಹವೇ ಜೀವನದ ಅಮೂಲ್ಯ ಸಂಪತ್ತು.
ಸಂತಸದ ಕ್ಷಣಗಳಲ್ಲಿ ಜೊತೆ ನಗುತು,
ಸಂಕಟದ ದಿನಗಳಲ್ಲಿ ಧೈರ್ಯ ತುಂಬುತ.
ಜೀವನದ ಪಥದಲ್ಲಿ ಬೆಳಕು ತಂದು,
ಕತ್ತಲಿನಲ್ಲಿ ದೀಪವಾಗಿ ನಿಂತು.
ನಂಬಿಕೆಯ ಸೇತುವೆ ಕಟ್ಟುವ,
ಸ್ನೇಹದ ಬಂಧ ಅಮರವಾಗಿರಲಿ.
ಸಮಯ ಬದಲಾದರೂ ಮನ ಬದಲಾಗದು,
ದೂರವಿದ್ದರೂ ಹೃದಯ ದೂರವಾಗದು.
ಒಮ್ಮೆ ಹುಟ್ಟಿದ ನಿಜ ಸ್ನೇಹ,
ಯುಗಯುಗಾಂತರ ಉಳಿಯುವ ನೆಹ.
ಸ್ನೇಹವೆ ದೇವರ ವರ,
ಅದು ನಮ್ಮ ಬದುಕಿನ ಆಧಾರ.

**ಕಿರಣ್ ರಾಜ್**

# ಸ್ವಚ್ಛಭಾರತ ಮಿಷನ್ ಜಾಗೃತಿ ಬೀದಿ ನಾಟಕ

**ನೈಜ್ಯ ದೆಸೆ ನ್ಯೂಸ್**

**ಸಿಂಧನೂರು: ನಗರದ ತಹಶಿಲ್ದಾರ ಕಛೇರಿಯಲ್ಲಿ ಸ್ವಚ್ಛಭಾರತ ಮಿಷನ್ 2.0 ಯೋಜನೆಯಡಿಯಲ್ಲಿ ಸ್ವಚ್ಛ ನಗರ,ಬಯಲು ಬಹಿರ್ದೆಸೆ ಹಾಗೂ ಪ್ಲಾಸ್ಟಿಕ್ ಮುಕ್ತ ನಗರ ಕುರಿತು ಕಲಾವಿದ-ರಿಂದ ಜಾಗೃತಿ ಅಭಿಯಾನಕ್ಕೆ ತಹಶಿಲ್ದಾರ ಅರುಣ್ ದೇಸಾಯಿ ಇಂದು ಚಾಲನೆ ನೀಡಿದರು.**

ನಗರ ಸಭೆ ಸಿಂಧನೂರು ಮತ್ತು ಸಂಕಲ್ಪ ಶಿಕ್ಷಣ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಮಾನ್ವಿ ಇವರ ಸಂಂ-ಯುಕ್ತಾಶ್ರಯದಲ್ಲಿ ಸಿಂಧನೂರು ಕೇಂದ್ರ ಬಸ್ ನಿಲ್ದಾಣದಲ್ಲಿ ಬೀದಿ ನಾಟಕ ಮುಖಾಂತರ ಜಾಗೃತಿ ಕಾರ್ಯಕ್ರಮಕ್ಕೆ ನಗರ ಸಭೆ ಪೌರಾಯುಕ್ತತಮಟೆ ಬಡಿಯುವ ಮುಖಾಂತರ ಚಾಲನೆನೀಡಿದರು.ಸ್ವಚ್ಛ ಭಾರತ ಬಯಲು



ಬಹಿರ್ದೆಸೆ, ಪ್ಲಾಸ್ಟಿಕ್ ಮುಕ್ತನಗರವಾಗಿಸಬೇಕು. ಅತಿಯಾದ ಪ್ಲಾಸ್ಟಿಕ್ ಬಳಕೆ ಕ್ಯಾನ್ಸರ್ ರೋಗಕ್ಕೆ ಕಾರಣವಾಗುತ್ತದೆ.

ಕಸ ವಿಲೇವಾರಿಯಲ್ಲಿ ಹಸಿಕಸ,ಒಣ-ಕಸ, ಅಪಾಯಕಾರಿ ಕಸನಿಮ್ಮ ಮನೆಗಳಲ್ಲಿ ವಿಂಗಡಣೆ ಮಾಡಿ ನಗರ ಸಭೆ ಪೌರ ಕಾರ್ಮಿಕರಿಗೆ ನೀಡಿ ಉದ್ಯೋಗ ಸೃಷ್ಟಿಹಾಗೂ ಸ್ವಚ್ಛನಗರ ಮಾಡಲು ಕೈ ಜೋಡಿಸಬೇಕು. ಅತಿಯಾದ ನೀರುಬಳಕೆಯಿಂದ ಮುಂದೆ ನೀರು ಸಿಗದಂತೆ ಪರಿಸ್ಥಿತಿ ನಿರ್ಮಾಣ ಚರಂಡಿ ಸ್ವಚ್ಛತೆ. ನೀರು ನಿಂತು ಸೊಳ್ಳೆ ಉತ್ಪತ್ತಿಯಾಗಿ ಡೆಂಗ್ಯೂ ಚಿಕನ್ ಗುನ್ಯಾ,ಮಲೇ-ರಿಯಾ ಟೈಫಾಯಿಡ್ ಮಾರಕ ರೋಗಗಳು ಹರಡುವಿಕೆ ಶೌಚಾಲಯ ಬಳಕೆ ಇನ್ನು ಮುಂತಾದ ವಿಷಯಗಳು ಕುರಿತು ಕಲಾವಿದರು ಬೀದಿ ನಾಟಕ ಮಾಡಿ ಜಾಗೃತಿ ಮೂಡಿಸಿದರು. ಈ ಸಂದರ್ಭದಲ್ಲಿ ಚೇತನ್ ನಾಯ್ಕ ಪರಿಸರ ಅಭಿಯಂತರರು.

ಹನುಮಂತ ಯಾದವ್ ಹಿರಿಯ ಆರೋಗ್ಯ ನಿರೀಕ್ಷಕರು, ಕಿರಿಯ ಆರೋಗ್ಯ ನಿರೀಕ್ಷಕ ಲಕ್ಷ್ಮೀಪತಿ ಗೌಡರ, ಲಿಂಗರಾಜ,ವೆಂಕಟೇಶ ಹಾಗೂ ನೈರ್ಮಲ್ಯ ಮೇಲ್ವಿಚಾರಕರು, ಸಮುದಾಯ ಸಂಚಾಲಕರು ಸಂಕಲ್ಪ ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ಅಧ್ಯಕ್ಷರು ಪರುಶುರಾಮ್ ಬಾಗಲವಾಡ ಹಾಗೂ ನಗರ ಸಭೆ ಅಧಿಕಾರಿ ವರ್ಗ, ಮತ್ತು ಕಲಾವಿದ ರಾಜಪ್ಪಸಿರವಾರ, ಪ್ರಕಾಶ ವಿಜಯಪುರ, ಜ್ಯೋತಿ, ಶಿವಪ್ಪ,ನಾಗನಗೌಡ ಬಾಗೇಶ ಶರಣಯ್ಯ,ರೇಖಾ ಪೂಜಾರಿ ಹಾಗೂ ಸಿಂಧನೂರು ತಾಲೂಕು ಸುತ್ತ ಮುತ್ತ ಗ್ರಾಮಗಳ ಜನ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದರು.

## ವಿದ್ಯಾರ್ಥಿಗಳು ತಂದೆ ತಾಯಿಗೆ ಗೌರವ ತರುವ ಕೆಲಸ ಮಾಡಬೇಕು: ನಾಗರತ್ನ ಗುತ್ತೇದಾರ

**ನೈಜ್ಯ ದೆಸೆ ನ್ಯೂಸ್**

**ಹಾಲಾಪೂರ ಗ್ರಾಮದಲ್ಲಿರುವ ಡಾ. ಬಿಆರ್ ಅಂಬೇಡ್ಕರ ಬಾಲಕಿಂ-ತುರ ವಸತಿ ಶಾಲೆಯಲ್ಲಿ 10ನೇ ತರಗತಿ ವಿದ್ಯಾರ್ಥಿಗಳಿಗೆ ಬೀಳ್ಕೊಡಿಗೆ ಸಮಾರಂಭ ನಡೆಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಪರಮಾನಂದ ಅಂಗರಿಗಿ ಗ್ರಂಥಪಾಲಕರು ನೆರವೇರಿಸಿದರು, ಸಾನಿಧ್ಯವನ್ನು ಶ್ರೀ ದಂಡಗುಂಡಪ್ಪ ತಾತ ಜಂಗಮರಹಳ್ಳಿ ಅಲಂಕರಿಸಿದ್ದರು.**




ಅಧ್ಯಕ್ಷತೆಯನ್ನು ಶಾಲೆಯ ಪ್ರಾಂಶುಪಾಲರಾದ ವೆಂಕೋಬ ದೇವಪೂರ ಮಾತನಾಡಿ ನಮ್ಮ ಶಾಲೆಯು ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಪ್ರತಿ ವರ್ಷ ಅತ್ಯುತ್ತಮವಾದ ಫಲಿತಾಂಶ ಬರುತ್ತಿದ್ದು ಈ ವರ್ಷವೂ ಸಹ ಒಳ್ಳೆಯ ಫಲಿತಾಂಶ ನೀಡಬೇಕು, ಮುಂದಿನ ನಿಮ್ಮ ಉನ್ನತ ಶಿಕ್ಷಣ ಯಶಸ್ವಿಯಿ0ದ ಕೂಡಿರಲಿ ಎಂದು ಹೇಳಿದರು. ನಂತರ ಮುಖ್ಯ ಭಾಷಣಕಾರರಾಗಿ ಆಗಮಿಸಿ ಮಾತನಾಡಿದ ನಾಗರತ್ನ ಗುತ್ತೇದಾರ ಬಳಗನೂರ ವಿದ್ಯಾರ್ಥಿಗಳು ಜೀವನದಲ್ಲಿ ಯಶಸ್ಸು, ಒಳ್ಳೆಯ ಹುದ್ದೆ ಸಿಗಬೇಕಾದರೆ ತಂದೆ ತಾಯಿಗಳಿಗೆ, ಗುರು ಹಿರಿಯರಿಗೆ ಗೌರವ ಕೊಡುವುದರ ಮೂಲಕ ಸಮಾಜದಲ್ಲಿ ಆದರ್ಶ ಪ್ರಾಯರಾಗಿ ಬದುಕಬೇಕು ಹಾಗೆ ಅಂಕಗಳ ಜೊತೆಗೆ ಮಾನವೀಯ ಮೌಲ್ಯ, ನೈತಿಕತೆ , ಆದರ್ಶ ವ್ಯಕ್ತಿಗಳ ಗುಣಗಳನ್ನು ಬೆಳಸಿಕೊಳ್ಳಬೇಕೆಂದು ಎಂದು ಹೇಳಿದರು, ಈ ಸಂದರ್ಭದಲ್ಲಿ ಮುಖ್ಯಗುರು ಸುಭಾಷ ಸಿಂಗ್ ಹಜಾರೆ, ನಾಗೇಶ ಜಂಗಮರಹಳ್ಳಿ ಪ್ರಾಚಾರ್ಯರು, ಹುಸೇನ ಬಾಷಾ ಪತ್ರಕರ್ತರು, ಸಿದ್ದು ಬಿ, ಪಾಲಕ ಪ್ರತಿನಿಧಿಯಾಗಿ ಬಸವರಾಜ ಜೆ, ಪಂಪಣ್ಣ ಜೆ, ಜಿ ವೆಂಕಟೇಶ ನಾಯಕ, ತಿಮ್ಮಣ್ಣ ನಾಯಕ, ಲಕ್ಷ್ಮಿ ಹಾಗೂ ನಿರೂಪಣೆಯನ್ನು ಮಂಜುನಾಥ ಶಿಕ್ಷಕರು ಮತ್ತು ಶಿಕ್ಷಕಿ ನೆರವೇರಿಸಿದರು, ಪಾಲಕ ಪೋಷಕರು ಇದ್ದರು ನಂತರ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

## ಯದ್ಲಾಪುರ ಗ್ರಾಮ ಪಂಚಾಯಿತಿಯಲ್ಲಿ VHSNC ತರಬೇತಿ ಹಾಗೂ ಉಚಿತ ಆರೋಗ್ಯ ಶಿಬಿರ



**ನೈಜ್ಯ ದೆಸೆ ನ್ಯೂಸ್**

**ದೇವರಸುಗೂರು: ಜಿಲ್ಲಾ ಪಂಚಾಯತ್ ಹಾಗೂ ತಾಲೂಕ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು, ಸಂಜೀವಿನಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ (NRLM) ಹಾಗೂ ಕೌಶಲ್ಯವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಯಾದ್ಲಾಪುರ ಗ್ರಾಮ ಪಂಚಾಯತ್ ಸಹಯೋಗದೊಂದಿಗೆ PRI-CBO ಸಮುದಾಯ ಆಧಾರಿತ ಒಗ್ಗೂಡಿಸುವಿಕೆ ಅಡಿಯಲ್ಲಿ VHSNC ತರಬೇತಿ ಕಾರ್ಯಕ್ರಮ, ಸಮನ್ವಯ ಮೇಳ ಹಾಗೂ ಉಚಿತ ಆರೋಗ್ಯ ಶಿಬಿರವನ್ನು ಹಮ್ಮಿಕೊಳ್ಳಲಾಯಿತು.**

ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಯಕ್ರಮ ಸಂಯೋಜಕರು ಶ್ರೀ ಬಸವರಾಜಪ್ಪಗೌಡ ಅವರು VHSNC ಕುರಿತು ತರಬೇತಿ ನೀಡಿದ್ದು, ಗ್ರಾಮ ಮಟ್ಟದಲ್ಲಿ ಆರೋಗ್ಯ, ಸ್ವಚ್ಛತೆ ಮತ್ತು ಪೌಷ್ಟಿಕತೆ ವಿಷಯಗಳಲ್ಲಿ ಸಮುದಾಯದ ಪಾತ್ರ ಅತ್ಯಂತ ಮಹತ್ವದ್ದೆಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಓಖಐಒ ತರಬೇತಿ ಕಾರ್ಯಕ್ರಮವೂ ಆಯೋಜಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಯಾದ್ಲಾಪುರ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ ಶ್ರೀಮತಿ ಚೆನ್ನಮ್ಮ, ಜಿಲ್ಲಾ ಕಾರ್ಯಕ್ರಮ ಸಂಯೋಜಕರು, ಸಮುದಾಯ ಆರೋಗ್ಯ ಅಧಿಕಾರಿಗಳು, ಆಶಾ ಕಾರ್ಯಕರ್ತೆಯರು, NRLM ಯಲ್ಲಪ್ಪ ಸರ್, IFC ಆಂಜಿನೇಯ್ಯ ಸರ್, BRP-PRI ಉರುಕುಂದಮ್ಮ, BRP-EP ಕವಿತಾ, MBK, LCRP, ಕೃಷಿ ಸಖಿ, ಪಶು ಸಖಿ, ವಿವಿಧ ಒಕ್ಕೂಟಗಳ ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಸ್ವಸಹಾಯ ಗುಂಪಿನ ಮಹಿಳೆಯರು ಭಾಗವಹಿಸಿದ್ದರು. ಕಾರ್ಯಕ್ರಮವು ಜನರಲ್ಲಿ ಆರೋಗ್ಯ ಜಾಗೃತಿ ಮೂಡಿಸುವಲ್ಲಿ ಹಾಗೂ ಸಮುದಾಯದ ಒಗ್ಗೂಡಿಸುವಿಕೆಯಲ್ಲಿ ಮಹತ್ವದ ಪಾತ್ರ ವಹಿಸಿತು.

## ಬೇಸಿಗೆಯಲ್ಲಿ ಮಕ್ಕಳಿಗೆ ಅತಿಯಾದ ಭೇದಿಯಿಂದ ನಿರ್ಜಲೀಕರಣ ಒಳಗಾಗದಂತೆ ನೋಡಿಕೊಳ್ಳಿ

**ನೈಜ್ಯ ದೆಸೆ ನ್ಯೂಸ್**

**ಸಿಂಧನೂರು: ತಾಲೂಕಿನ ಸಮೀಪದ ಜಂಗಮರಹಟ್ಟಿ ಅಂಗನವಾಡಿ ಕೇಂದ್ರದಲ್ಲಿ ಮಕ್ಕಳಿಗೆ ಬೇಸಿಗೆಯಲ್ಲಿ ಅತಿಸಾರ ಭೇದಿ ಉಂಟಾಗದಂತೆ ಎಚ್ಚರ ವಹಿಸಲು ಆರೋಗ್ಯ ಶಿಕ್ಷಣ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.**

ನಂತರ ಕಾರ್ಯಕ್ರಮದ ಕು-ರಿತು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ಅವರ ಮಾತನಾಡಿದರು ಮಾನವನ ದೇಹದಲ್ಲಿ ಕಂಡು ಬರುವ ಸೂಕ್ಷ್ಮಾಣುಗಳಿಂದ ಅನೇಕ ಖಾಯಿಲೆಗಳು ಬರಬಹುದು ಅದರಲ್ಲಿ ವಿಶೇಷವಾಗಿ ಅತಿಸಾರ ಬೇಧಿ ಪ್ರಮುಖವಾಗಿರುತ್ತದೆ ಒಂದು ವೇಳೆ ಸೂಕ್ಷ್ಮಾಣು ಜೀವಿಗಳು ನೀರು ಅಥವಾ ಆಹಾರದೊಳಗೆ ಸೇರಿದ್ದಲ್ಲಿ ಹಾಗೂ ಆಹಾರದ ತಯಾರಿಕೆ ಮತ್ತು ಸೇವಿಸುವಿಕೆ ಕ್ರಿಯೆಗಳು ಮೂಲಕ ಮಾನವನ ದೇಹವನ್ನು ಪ್ರವೇಶಿಸಿ ಅನಾರೋಗ್ಯಕ್ಕೆ ಕಾರಣ ಉಂಟಾಗುತ್ತದೆ.




ಮನುಷ್ಯರಲ್ಲಿ ಸೂಕ್ಷ್ಮಜೀವಿಗಳನ್ನು ಆಹಾರ ಮತ್ತು ನೀರಿನ ಮುಖಾಂತರ ಹರಡುತ್ತವೆ ಸ್ವಚ್ಛ ಇಲ್ಲದ ಮನುಷ್ಯನ ದೇಹ ಕೈ ಮುಖ ಮತ್ತು ನೊಣಗಳು ಆಕರ್ಷಿಸುತ್ತದೆ ಸೂಕ್ಷ್ಮಾಣುಗಳು ವ್ಯಕ್ತಿಯಿಂದ ವ್ಯಕ್ತಿಗೆ ಹಾಡುತ್ತವೆ ದೃಷ್ಟಿಯು ದುರ್ಬಲಗೊಳ್ಳಬಹುದು ಅಥವಾ ಕಳೆದುಕೊಳ್ಳಬಹುದು ಅತಿಸಾರ ಭೇದಿ ಉಂಟಾದಲ್ಲಿ ತಕ್ಷಣ ಮಗುವಿಗೆ ಒಂದು ಲೀಟರ್ ನಷ್ಟು ಶುದ್ಧವಾದ ಮತ್ತು ಸುರಕ್ಷಿತವಾದ ಕುಡಿಯುವ ನೀರನ್ನು ಒಂದು ಜಾರು ಮತ್ತು ಪಾತ್ರೆಯಲ್ಲಿ ತೆಗೆದುಕೊಳ್ಳಿ ಒಂದು ಓ ಆರ್ ಎಸ್ ಪುಡಿಯ ಪಾಕೆಟ್ ಅನ್ನು ಹಾಕಿ ಅದನ್ನು ಚೆನ್ನಾಗಿ ಕಲಿಸಿ ಒಂದು ಸಣ್ಣನೆಯ ಸ್ವಚ್ಛವಾದ ನೋಟದಲ್ಲಿ ಬೆರೆಸಿ ದ್ರಾವಣವನ್ನು ತೆಗೆದುಕೊಳ್ಳಿ ಮತ್ತು ಅದನ್ನು ಚಮಚದ ಮೂಲಕ ಮಗುವಿಗೆ ಕುಡಿಸಿ ಮತ್ತು ಜಿಂಕ್ ಮಾತ್ರೆ ಮತ್ತು ಸರಪನ್ನು ಸರಿಯಾದ ಪ್ರಮಾಣದಲ್ಲಿ ನೀಡುವ ಮೂಲಕ ಅತಿಸಾರ ಭೇದಿಯನ್ನು ತಡೆಗಟ್ಟಬಹುದಾಗಿದೆ.

ವಯಸ್ಸಿಗೆ ಅನುಗುಣವಾಗಿ ಸ್ತನ್ಯಪಾನ ಹಾಗೂ ಆಹಾರ ಉಣಿಸುವುದನ್ನು ಮುಂದುವರಿಸಬೇಕು ಮಗುವಿನ ಕಣ್ಣು ಗುಳಿ ಹೋಗಿರುವುದು ಹೊಟ್ಟೆ ಕಿವಿಚಿರುವುದು ಕಂಡು ಬಂದರೆ ಕೂಡಲೇ ಹತ್ತಿರದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳಬೇಕು ಎಂದರು. ಈ ಸಂದರ್ಭದಲ್ಲಿ ಪ್ರಾಥಮಿಕ ಆರೋಗ್ಯ ಸುರಕ್ಷಾ ಅಧಿಕಾರಿಗಳಾದ ರಾಧಾ ಮತ್ತು ಅಂಗನವಾಡಿ ಕಾರ್ಯಕರ್ತೆಯರಾದ ಅಕ್ಕಮಹಾದೇವಿ ಅಂಗನವಾಡಿ ಸಹಾಯಕಿ ಸುಜಾತಾ ಆಶಾ ಕಾರ್ಯಕರ್ತೆಯರಾದ ಶರಣಮ್ಮ ಹಾಗೂ ತಾಯಿಂದಿರು ಉಪಸ್ಥಿತರಿದ್ದರು

## ವಿಶೇಷ ಚೇತನ ಮಕ್ಕಳಿಗೆ ಅರಿವು ಮತ್ತು ಕ್ರೀಡೆ ಕಾರ್ಯಕ್ರಮ

**ನೈಜ್ಯ ದೆಸೆ ನ್ಯೂಸ್**

**ತಾಳಿಕೋಟೆ: ಪಟ್ಟಣದ ಆಶ್ರಯ ಬಡಾವಣೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಶೇಷ ಚೇತನ ಮಕ್ಕಳಿಗೆ ಅರಿವು ಮತ್ತು ಕ್ರೀಡೆ ಕಾರ್ಯಕ್ರಮವನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಬಿಎಸ್.ಸಾವಳಗಿ ಉದ್ಘಾಟಿಸಿ ಮಾತನಾಡಿ, ವಿಶೇಷ ಚೇತನ ಮಕ್ಕಳಿಗೆ ಸಾಮಾನ್ಯ ಮಕ್ಕಳ ಜೊತೆ ಶಿಕ್ಷಣ ಹಾಗೂ ಇತರ ಅವಕಾಶಗಳನ್ನು ನೀಡಿ ಆತ್ಮವಿಶ್ವಾಸವನ್ನು ತುಂಬುವ ಕೆಲಸವಾಗಬೇಕು ಎಂದು ಸಲಹೆ ನೀಡಿದರು.**



ಈ ಸಂದರ್ಭದಲ್ಲಿ ಕ್ಷೇತ್ರ ಸಮನ್ವಯಾಧಿಕಾರಿ ಆರ್.ಬಿ.ದಮ್ಮೂರಮಠ, ಮುಖ್ಯಶಿಕ್ಷಕ ಎಂ.ಬಿ.ನಾಗೂರ ಎಸ್‌ಡಿಎಂಸಿ ಅಧ್ಯಕ್ಷ ದಸ್ತಗೀರ ಯಾಕಿನ್, ಬಿಐಆರ್ಟಿ.ಎಸ್. ಎಸ್ ರಾಮತಾಳ, ಆರ್.ಎಚ್.ಢವಳಗಿ, ಕೆ. ಎಸ್.ಸಜ್ಜನ್ ಮಾತನಾಡಿದರು. ಸಿಆರ್ಪಿಗಳು ಪಾಲಕರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಮಕ್ಕಳಿಗೆ ಲಘು ಆಟಗಳನ್ನು ಲಘು ಮನರಂಜನಾ ಕಾರ್ಯಕ್ರಮಗಳನ್ನು ಏರ್ಪಡಿಸಿ ಅವ-ರಿಗೆ ಬಹುಮಾನ ಹಾಗೂ ಪ್ರಶಸ್ತಿ ಪತ್ರಗಳನ್ನು ವಿತರಿಸಲಾಯಿತು.

## ಸ್ವಾಮಿ ವಿವೇಕಾನಂದ ಇನ್ಸ್ಟಿಟ್ಯೂಟ್ ಆಫ್ ಫಾರ್ಮಸಿ ಲಿಂಗಸ್ಗೂರಿನ ಆರು ವಿದ್ಯಾರ್ಥಿಗಳು ಫಾರ್ಮಸಿ ಅಧಿಕಾರಿ ಸರಕಾರಿ ಹುದ್ದೆಗೆ ಆಯ್ಕೆ

**ನೈಜ್ಯ ದೆಸೆ ನ್ಯೂಸ್**

**ಬೆಂಗಳೂರು: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತದ ವೃಂದಗಳ ನೇಮಕಾತಿ ಆದೇಶಗಳ ವಿತರಣಾ ಸಮಾರಂಭ ದಲ್ಲಿ 21ನೇ ಫೆಬ್ರವರಿ 2026, ಶನಿವಾರ, ಭಾರತ ರತ್ನ ಡಾ.ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಬೆಂಗಳೂರನಲ್ಲಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಲ್ಯಾಣ ಕರ್ನಾಟಕ ವೃಂದದ ಫಾರ್ಮಸಿ ಅಧಿಕಾರಿ ಹುದ್ದೆಗೆ ಆಯ್ಕೆಯಾಗಿರುವ 65 ಅಭ್ಯರ್ಥಿಗಳ ನೇಮಕಾತಿ ಆದೇಶ ನೀಡಿದ್ದಾರೆ.**

ಇದರಲ್ಲಿ ಸ್ವಾಮಿ ವಿವೇಕಾನಂದ ಇನ್ಸ್ಟಿಟ್ಯೂಟ್ ಆಫ್ ಫಾರ್ಮಸಿ ಲಿಂಗಸೂರಿನ ಆರು ವಿದ್ಯಾರ್ಥಿಗಳಾದ, ಸೂಗುರೇಶ್, ದೇವಪ್ಪ, ರೇಷ್ಮಾ,



ಸುನಂದಾ, ಸ್ನೇಹ, ಶಿಲ್ಪ ಈ ವಿದ್ಯಾರ್ಥಿಗಳು ಆದ-'ೀಶ ಪತ್ರವನ್ನು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರಿಂದ ಪಡೆದಿದ್ದಾರೆ. ಉಲ್ಲೇಖ (2) ರ ಅಧಿಸೂಚನೆಯ ಅಂತಿಮ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಕ್ರಮ ಸಂಖ್ಯೆಯ ಅನುಸಾರ ಪೊಲೀಸ್ ಪೂರ್ವಾಪರ ವರದಿಗಳು, ಸಿಂಧುತ್ವ ಪ್ರಮಾಣ ಪತ್ರಗಳು, ಕಲ್ಯಾಣ ಕರ್ನಾಟಕ (371ಜೆ) ನೈಜಿತಾ ಪ್ರಮಾಣ ಪತ್ರ ಹಾಗೂ ಇತರೇ ನೈಜಿತಾ ವರದಿಗಳು ಸ್ವೀಕೃತವಾದ ಕೆಳಕಂಡ ಅಭ್ಯರ್ಥಿಗಳಿಗೆ ಫಾರ್ಮಸಿ ಅಧಿಕಾರಿ ಹುದ್ದೆಗೆ ವೇತನ ಶ್ರೇಣಿ ರೂ. 44425– ರಲ್ಲಿ ಎರಡು ವರ್ಷಗಳ ಖಾಯಂಪೂರ್ವ ಸೇವಾ ಅವಧಿಯ ಕೌನ್ಸಿಲಿಂಗ್ ಮೂಲಕ ಆಯ್ಕೆಮಾಡಿಕೊಂಡಿರುವ ಆಸ್ಪತ್ರೆ/ಸಂಸ್ಥೆಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ನೇಮಕ ಮಾಡಿ ಸ್ಥಳ ನಿಯುಕ್ತಿಗೊಳಿಸಲಾಗಿದೆ... ಈ ಕಾರ್ಯಕ್ರಮದಲ್ಲಿ ಸ್ವಾಮಿ ವಿವೇಕಾನಂದ ಇನ್ಸ್ಟಿಟ್ಯೂಟ್ ಆಫ್ ಫಾರ್ಮಸಿ ಕಾಲೇಜಿನ ಅಧ್ಯಕ್ಷರಾದ ಶ್ರೀ ಶಾಂತನಗೌಡ ಪಾಟೀಲ್ ಅವರು ವಿದ್ಯಾರ್ಥಿಗಳ ಯಶಸ್ವಿಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.. ಈ ಕಾರ್ಯಕ್ರಮದಲ್ಲಿ ಮಾನ್ಯ ಶ್ರೀ ಸಿದ್ದರಾಮಯ್ಯ ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರ, ಶ್ರೀ ದಿನೇಶ್ ಗುಂಡೂರಾವ್ ಸಚಿವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶ್ರೀ ರಿಜ್ವಾನ್ ಅರ್ಷದ್ ಶಾಸಕರು ಶಿವಾಜಿನಗರ ಕ್ಷೇತ್ರ, ಶ್ರೀ ಹರ್ಷಗುಪ್ತ ಭಾ.ಆ.ಸೇ. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, ಶ್ರೀ ಶ್ರೀನಿವಾಸ್ ಕೆ. ಭಾ.ಅ.ಸೇ. ಆಯುಕ್ತರು, ಆಹಾರ ಸುರಕ್ಷತೆ ಮತ್ತು ಔಷಧ ಅಡಳಿತ ಕರ್ನಾಟಕ ಸರ್ಕಾರ , ಶ್ರೀ ಗುರುದತ್ ಹೆಗಡೆ ಭಾ.ಆ.ಸೇ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಕರ್ನಾಟಕ ಸರ್ಕಾರ, ,ಡಾ. ಅವಿನಾಶ್ ಮೆನನ್ ರಾಜೇಂದ್ರನ್ ಭಾ.ಆ.ಸೇ.ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಕರ್ನಾಟಕ ಸರ್ಕಾರ, ಡಾ. ವಸಂತ್ ಕುಮಾರ್, ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಕರ್ನಾಟಕ ಸರ್ಕಾರ ಹಾಗೂ ಫಾರ್ಮಸಿ ಅಧಿಕಾರಿ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳು ಹಾಗೂ ಅಭ್ಯರ್ಥಿಗಳ ಪಾಲಕರು ಉಪಸ್ಥಿತರಿದ್ದರು

# ಸನ್ ರೈಸ್ ಕಾಲೇಜಿನ ಶನಿವಾರದ ವಿಶೇಷ ಉಪನ್ಯಾಸ ನೀಡಿದ ಡಾ ಫುರ್ಖಾನ್ ಅಲಿ

**ನೈಜ್ಯ ದೆಸೆ ನ್ಯೂಸ್**

**ಸಿಂಧನೂರು: ಸನ್ ರೈಸ್ ಡಿ ಫಾರ್ಮಸಿ, ನರ್ಸಿಂಗ್, ಪ್ಯಾರಾ ಮೆಡಿಕಲ್ ಕಾಲೇಜು ಸಿಂಧನೂರಿನಲ್ಲಿ ಪ್ರತೀ ಶನಿವಾರ ನಡೆಯುವ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ದಿನಾಂಕ 21 ಫೆಬ್ರವರಿ ಶನಿವಾರ ರಂದು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಯಿತು.**

ಈ ಕಾರ್ಯಕ್ರಮಕ್ಕೆ Dr. Furkhan Ali (MBBS, MD General Medicine), ಆದರ್ಶ ಆಸ್ಪತ್ರೆ ಸಿಂಧನೂರು ವೈದ್ಯಾಧಿಕಾ-ರಿಗಳು ಮುಖ್ಯ ಅತಿಥಿಗಳಾಗಿ ಆಗಮಿಸಿದರು. ಅವರು ``Vital Signs'' ಎಂಬ ಮಹತ್ವದ ವಿಷಯದ ಕುರಿತು ವಿದ್ಯಾರ್ಥಿಗಳಿಗೆ ವಿಶೇಷ ಉಪನ್ಯಾಸ ನೀಡಿದರು. ತಮ್ಮ ಉಪನ್ಯಾಸದಲ್ಲಿ ಅವರು ರೋಗಿಗಳ ಆರೋಗ್ಯ ಸ್ಥಿತಿಯನ್ನು ಅಳೆಯುವ ಪ್ರಮುಖ ಸೂಚಕಗಳಾದ ದೇಹದ




ತಾಪಮಾನ, ನಾಡಿದೊತ್ತಡ (Pulse), ಉಸಿರಾಟದ ಪ್ರಮಾಣ (Respiration) ಹಾಗೂ ರಕ್ತದ ಒತ್ತಡ (Blood Pressure) ಕುರಿತು ವಿವರವಾಗಿ ತಿಳಿಸಿದರು. ಇವುಗಳ ಮಹತ್ವ ಮತ್ತು ನರ್ಸಿಂಗ್ ಕ್ಷೇತ್ರದಲ್ಲಿ ಅವುಗಳ ಅನಿವಾರ್ಯತೆ ಕುರಿತು ಸ್ಪಷ್ಟನೆ ನೀಡಿದರು.

ಇದೇ ಸಂದರ್ಭದಲ್ಲಿ ನರ್ಸಿಂಗ್ ವೃತ್ತಿಯ ಮಹತ್ವ, ಸೇವಾ ಮನೋಭಾವ ಹಾಗೂ ವೈದ್ಯಕೀಯ ಕ್ಷೇತ್ರದಲ್ಲಿ ನರ್ಸ್‌ಗಳ ಪಾತ್ರದ ಕುರಿತು ಮಾತನಾಡಿ ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸವನ್ನು ಹೆಚ್ಚಿಸುವಂತೆ ಪ್ರೇರಣಾದಾಯಕ ಸಂದೇಶ ನೀಡಿದರು.ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಿತು. ಉಪನ್ಯಾಸದಿಂದ ವಿದ್ಯಾರ್ಥಿಗಳು ಹೆಚ್ಚಿನ ಜ್ಞಾನವನ್ನು ಪಡೆದುಕೊಂಡು ಸಂತೋಷ




ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ನರ್ಸಿಂಗ್ ಪ್ರಾಚಾರ್ಯರಾದ ಸಿರಿಲ್ ಅವರು ಮಾತನಾಡಿ, "ಇಂದಿನ ಫುರ್ಖಾನ್ ಅಲಿ ಸರ್ ಅವರ ವಿಶೇಷ ಉಪನ್ಯಾಸದಿಂದ ನಮ್ಮ ವಿದ್ಯಾರ್ಥಿಗಳಿಗೆ ಅತ್ಯಂತ ಉಪಯುಕ್ತವಾದ ಮಾಹಿತಿ ದೊರಕಿದೆ.

`Vital Signs' ವಿಷಯದ ಬಗ್ಗೆ ವೈದ್ಯಾಧಿಕಾರಿಗಳು ನೀಡಿದ ಸ್ಪಷ್ಟ ಹಾಗೂ ವೈಜ್ಞಾನಿಕ ವಿವರಗಳು ವಿದ್ಯಾರ್ಥಿಗಳ ಜ್ಞಾನವನ್ನು ವೃದ್ಧಿಸುವುದರ ಜೊತೆಗೆ ಅವರ ಆತ್ಮವಿಶ್ವಾಸವನ್ನೂ ಹೆಚ್ಚಿಸಿವೆ. ಇಂತಹ ಉಪನ್ಯಾಸಗಳು ಭವಿಷ್ಯದಲ್ಲಿ ಉತ್ತಮ ನರ್ಸ್‌ಗಳಾಗಿ ರೂಪುಗೊಳ್ಳಲು ಸಹಕಾರಿ ಆಗುತ್ತವೆ" ಎಂದು ಹೇಳಿದರು. ಸಂಸ್ಥೆಯ ಕಾರ್ಯದರ್ಶಿಗಳಾದ ಇರ್ಷಾದ್ ಕೆ, ನರ್ಸಿಂಗ್ ಪ್ರಾಚಾರ್ಯರಾದ ಸಿರಿಲ್ ಹಾಗೂ ಆಸಿಫ್ ಹಾಗೂ ಎಲ್ಲಾ ವಿಭಾಗದ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಸೇರಿ ಮುಖ್ಯ ಅತಿಥಿಗಳಿಗೆ ಕೃತಜ್ಞತೆ ಸಲ್ಲಿಸಿ ಸನ್ಮಾನಿಸಿ ಗೌರವಿಸಿದರು.


## ನೇಮಕಾತಿ ಪ್ರಕಟಣೆ

KSRLPS ನೇಮಕಾತಿ 2026-22 ಬ್ಲಾಕ್ ಮ್ಯಾನೇಜರ್, ಆಫೀಸ್ ಅಸಿಸ್ಟೆಂಟ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ KS-RLPS ನೇಮಕಾತಿ 2026: 22 ಬ್ಲಾಕ್ ಮ್ಯಾನೇಜರ್, ಆಫೀಸ್ ಅಸಿಸ್ಟೆಂಟ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಪ್ರಚಾರ ಸಂಘವು ಫೆಬ್ರವರಿ 2026 ರ KS-RLPS ಅಧಿಕೃತ ಅಧಿಸೂಚನೆಯ ಮೂಲಕ ಬ್ಲಾಕ್ ಮ್ಯಾನೇಜರ್, ಆಫೀಸ್ ಅಸಿಸ್ಟೆಂಟ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ವಿಜಯಪುರ ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 05-ಮಾರ್ಚ್-2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 18-02-2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 05-ಮಾರ್ಚ್-2026 ಅಧಿಕೃತ ವೆಬ್‌ಸೈಟ್: ksrlps.karnataka.gov.in

## ತಾಲೂಕಾಡಳಿತದಿಂದ ಕವಿ ಸರ್ವಜ್ಞನವರ ಜಯಂತಿ ಆಚರಣೆ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದ ತಹಸಿಲ್ದಾರ್ ಕಾರ್ಯಾಲಯದ ಸಭಾಂಗಣದಲ್ಲಿ ತಾಲೂಕ ಆಡಳಿತ ಹಾಗೂ ಕುಂಬಾರ ಸಮಾಜದ ಸಹಯೋಗದಲ್ಲಿ ಮಹಾನ್ ಸಂತ ಕವಿ ಸರ್ವಜ್ಞನವರ 506ನೇ ಜಯಂತಿಯನ್ನು ಶುಕ್ರವಾರ ಅರ್ಥಪೂರ್ಣವಾಗಿ ಆಚರಿಸಲಾಯಿತು.**



ಆರಂಭದಲ್ಲಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ತಹಸಿಲ್ದಾರ್ ಗ್ರೇಡ್–2 ಪ್ರದೀಪ ದೇವಗಿರಿ ಅವರು ಕವಿ ಸರ್ವಜ್ಞನವರ ಭಾವಚಿತ್ರಕ್ಕೆ ಪೂಜೆಸಲ್ಲಿಸಿ ಪುಷ್ಪ ನಮನ ಅರ್ಪಿಸಿ ಜಯಂತಿಯ ಶುಭಾಶಯಗಳನ್ನು ತಿಳಿಸಿದರು. ಈ ಸಂದರ್ಭದಲ್ಲಿ ಶಿಕ್ಷಕ ಗುಂಡೂರಾವ್ ಧನಪಾಲ ಅವರು ಮಾತನಾಡಿ 16ನೇ ಶತಮಾನದಲ್ಲಿ ತನ್ನ ತೀಕ್ಷ್ಣ ವಚನಗಳ ಮೂಲಕ ಸರ್ವಜ್ಞನವರು ಸಮಾಜದ ಅನಿಷ್ಟಗಳನ್ನು ದೂರೀಕರಿಸಲು ಪ್ರಯತ್ನಿಸಿದರು. ಸಮಾಜದಲ್ಲಿರುವ ಜಾತಿ ವ್ಯವಸ್ಥೆಯನ್ನು ವಚನಗಳ ಮೂಲಕ ದಿಟ್ಟವಾಗಿ ವಿರೋಧಿಸಿದರು.'

ಜಾತಿ ಹೀನನ ಮನೆಯ ಜ್ಯೋತಿ ತಾನೆ ಹೀನವೆ ಎಂದು ಪ್ರಶ್ನಿಸಿದರು ವ್ಯಕ್ತಿಯ ಶ್ರೇಷ್ಠತೆ ಜಾತಿಯಿಂದಲ್ಲ ನೀತಿಯಿಂದಾಗುತ್ತದೆ ಎಂದು ಸಮಾಜಕ್ಕೆ ತೋರಿಸಿಕೊಟ್ಟರು. ಅವರ ವಚನಗಳ ಅಧ್ಯಯನ ಮಾಡುವುದರೊಂದಿಗೆ ಬದುಕಿನ ಆದರ್ಶಗಳನ್ನು ನಾವೆಲ್ಲರೂ ಅನುಸರಿಸುವ ಅಗತ್ಯವಿದೆ ಎಂದರು. ಕುಮಾರಿ ಈಶ್ವರಿ ಪರಶುರಾಮ ಕುಂಬಾರ ಸರ್ವಜ್ಞನವರ ಜೀವನ ಚರಿತ್ರೆ ಕುರಿತು ಮಾರ್ಮಿಕವಾಗಿ ಮಾತನಾಡಿದರು. ಅವರನ್ನು ತಾಲೂಕ ಆಡಳಿತದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಪ್ರಮುಖರಾದ ಮಹಾದೇವಪ್ಪ ಕುಂಬಾರ, ಸಿದ್ದಣ್ಣ ಶರಣರ,ಬಸವರಾಜ ಕುಂಬಾರ, ಕಾಶಿನಾಥ ಕುಂಬಾರ, ಅನಿಲ್ ಕುಂಬಾರ ಮಲ್ಲಿಕಾರ್ಜುನ ಕುಂಬಾರ, ಶಿವಣ್ಣ ಕುಂಬಾರ, ಶ್ರೀಶೈಲ ಕುಂಬಾರ, ಪರಶುರಾಮ ಕುಂಬಾರ, ಸಂಗು ಕುಂಬಾರ, ಮಹೇಶ ಕುಂಬಾರ, ಮಹಾದೇವಪ್ಪ ಈ.ಕುಂಬಾರ, ನಾಗರಾಜ ಕುಂಬಾರ, ಸಮಾಜ ಕಲ್ಯಾಣ ಇಲಾಖೆಯ ಎಸ್.ಎಂ.ಕಲಬುರ್ಗಿ, ನಿಲಯ ಪಾಲಕ ಎಚ್.ಎಸ್.ಬಾದವಾಡಗಿ ಹಾಗೂ

## ಇಂದು ದತ್ತಿ ಉಪನ್ಯಾಸ ಮತ್ತು ಪ್ರೇರಣಾ ಪ್ರಶಸ್ತಿ ಪ್ರದಾನ ಸಮಾರಂಭ


ನೈಜ್ಯ ದೆಸೆ ನ್ಯೂಸ್

**ಜಿಲ್ಲಾ ಹಾಗೂ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಮತ್ತು ವಿಮಲಬಾಯಿ ಭಗತರಾಜ ನಿಜಾಮಕಾರಿ ಪ್ರತಿಷ್ಠಾನದಿಂದ ನಗರದ ಕನ್ನಡ ಭವನದಲ್ಲಿ ಫೆ.22 ರಂದು ಸಂಜೆ 5 ಗಂಟೆಗೆ ದತ್ತಿ ಉಪನ್ಯಾಸ ಮತ್ತು ಪ್ರೇರಣಾ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆಂದು ಕಸಾಪ ತಾಲೂಕು ಅಧ್ಯಕ್ಷ ಡಾ.ಬಿ.ವಿಜಯರಾಜೇಂದ್ರ ಹೇಳಿದರು.**



ನಗರದ ಪತ್ರಿಕಾ ಭವನದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ಶಿವುಬಾಯಿ ತುಳಜಾರಾಮ ನಿಜಾಮಕಾರಿ ದತ್ತಿ ಉಪನ್ಯಾಸ ಮತ್ತು ಪ್ರೇರಣಾ ಪ್ರಶಸ್ತಿ ಸಮಾರಂಭದಲ್ಲಿ ಕನ್ನಡ ಮತ್ತು ತೆಲುಗು ಭಾಷಾ ಸಾಂಸ್ಕೃತಿಕ ಬಾಂಧವ್ಯ ಕುರಿತು ಹೈದ್ರಾಬಾದಿನ ನಿವೃತ್ತ ಪ್ರಾಧ್ಯಾಪಕ ಗೋನವಾರ ಕಿಷನರಾವ್ ಉಪನ್ಯಾಸ ನೀಡಲಿದ್ದಾರೆ. ಅಧ್ಯಕ್ಷತೆಯನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ರಂಗಣ್ಣ ಪಾಟೀಲ್ ಅಳ್ಳುಂಡಿ ವಹಿಸಲಿದ್ದಾರೆ. ಪ್ರೇರಣಾ ಪ್ರಶಸ್ತಿಯನ್ನು ರಾಯಚೂರು ವಾಣಿಜ್ಯ ತೆರಿಗೆ ಅಧಿಕಾರಿ ಸುಜಾತ.ಟಿ ಇವರಿಗೆ ಪ್ರದಾನ ಮಾಡಲಾಗುತ್ತದೆ ಎಂದರು. ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಪರಿಷತ ನಿಕಟಪೂರ್ವ ಅಧ್ಯಕ್ಷ ಬಸವಪ್ರಭು ಪಾಟೀಲ್ ಬೆಟ್ಟದೂರು, ಪತ್ರಕರ್ತ ಚಂದ್ರಕಾಂಸ ಮಸಾನಿ, ಸಾಹಿತಿ ಶ್ರೀನಿವಾಸ ಗಟ್ಟು, ಬಷೀರ ಅಹ್ಮದ ಹೊಸಮನಿ, ವೆಂಕಟರಾವ್ ಕುಲ್ಕರ್ಣಿ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು. ಈ ಸಂದರ್ಭದಲ್ಲಿ ಪ್ರತಿಷ್ಠಾನದ ಅಧ್ಯಕ್ಷ ಭಗತರಾಜನಿಜಾಮಕಾರಿ, ಪ್ರಮುಖರಾದ ಅಶೋಕ ಕುಮಾರ ಜೈನ್, ವೆಂಕಟರಾವ್ ಕುಲ್ಕರ್ಣಿ, ಬಷಿರ ಅಹ್ಮದ್, ಪ್ರತಿಭಾ ಗೋನಾಳ ಇದ್ದರು.

## ಕರೇಗುಡ್ಡ ಗ್ರಾಮದಲ್ಲಿ ಗ್ರಂಥಾಲಯ ಹಾಗೂ ಶಾಲೆಗೆ ಮೂಲಭೂತ ಸೌಕರ್ಯ ಕಲ್ಪಿಸಲು ಮನವಿ



ನೈಜ್ಯ ದೆಸೆ ನ್ಯೂಸ್

**ಮಾನ್ವಿ: ತಾಲೂಕಿನ ನಕ್ಕುಂದಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಕರೇಗುಡ್ಡ ಗ್ರಾಮದಲ್ಲಿರುವ ಗ್ರಂಥಾಲಯ, ಅಂಗನವಾಡಿ ಕೇಂದ್ರ ಹಾಗೂ ಸರ್ಕಾರಿ ಪ್ರಾಥಮಿಕ ಹಿರಿಯ ಶಾಲೆಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ತಕ್ಷಣ ಕಲ್ಪಿಸಬೇಕು ಎಂದು ಆಗ್ರಹಿಸಿ ದಲಿತ ವಿದ್ಯಾರ್ಥಿ ಪರಿಷತ್ ಬಂಡೆಗುರು ಕರೇಗುಡ್ಡ ಅಧ್ಯಕ್ಷರು ಸಂಸದರಾದ ಜಿ.ಕುಮಾರ್ ನಾಯಕ್, ಸಚಿವ ಎನ್.ಎಸ್.ಬೋಸರಾಜು ಹಾಗೂ ಮಾನ್ವಿ ಶಾಸಕ ಹಂಪಯ್ಯ ಸಾಹುಕಾರ ಅವರಿಗೆ ಮನವಿ ಪತ್ರ ಸಲ್ಲಿಸಿದರು.**

ಈ ಸಂದರ್ಭದಲ್ಲಿ ಮಾತನಾಡಿದ ಮುಖಂಡರು, ಕರೇಗುಡ್ಡ ಗ್ರಾಮದಲ್ಲಿರುವ ಹಳೆಯ ಅಂಗನವಾಡಿ ಕೇಂದ್ರವು ಸಂಪೂರ್ಣ ಹಾಳಾಗಿದ್ದು, ಯಾವುದೇ ಮೂಲಭೂತ ಸೌಕರ್ಯಗಳಿಲ್ಲದೆ ವಿದ್ಯಾರ್ಥಿಗಳು ಮತ್ತು ಓದುಗರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ದೂರಿದರು. ಸರ್ಕಾರಗಳು ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸಲು ವಿವಿಧ ಯೋಜನೆಗಳನ್ನು ಜಾರಿಗೆ ತರುತ್ತಿದ್ದರೂ, ಸಂಬಂಧಿತ ಅಧಿಕಾರಿಗಳ ನಿರ್ಲಕ್ಷ್ಯದಿಂದ ಗ್ರಾಮ ಮಟ್ಟದಲ್ಲಿ ಅವು ಸರಿಯಾಗಿ ಅನುಷ್ಠಾನಗೊಳ್ಳುತ್ತಿಲ್ಲ ಎಂದು ಆರೋಪಿಸಿದರು. ಗ್ರಾಮದಲ್ಲಿರುವ ಗ್ರಂಥಾಲಯದಲ್ಲಿ ಕುಡಿಯುವ ಸ್ವಚ್ಛ ನೀರಿನ ವ್ಯವಸ್ಥೆ ಇಲ್ಲದಿರುವುದು, ಪ್ರತಿ ತಿಂಗಳು ಪತ್ರಿಕೆಗಳು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳ ಮಾಸಪತ್ರಿಕೆಗಳು ಒದಗಿಸದಿರುವುದು, ಓದುಗರಿಗೆ ಸೂಕ್ತ ಸೌಲಭ್ಯಗಳ ಕೊರತೆ ಇರುವುದು ಗಂಭೀರ ಸಮಸ್ಯೆಯಾಗಿದೆ ಎಂದು ಅವರು ತಿಳಿಸಿದರು.

ಆದ್ದರಿಂದ ಕರೇಗುಡ್ಡ ಗ್ರಾಮಕ್ಕೆ ಸಮರ್ಪಕ ಗ್ರಂಥಾಲಯ ಕಟ್ಟಡ, ಮೂಲಭೂತ ಸೌಲಭ್ಯಗಳು ಹಾಗೂ ವಿದ್ಯಾರ್ಥಿಗಳಿಗೆ ಅಗತ್ಯ ಶೈಕ್ಷಣಿಕ ಸೌಲಭ್ಯಗಳನ್ನು ತಕ್ಷಣ ಒದಗಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ. ಈ ಸಂದರ್ಭದಲ್ಲಿ ಅಂಬಯ್ಯಗೌಡ, ಚನ್ನಬಸವ ನಾಯಕ್, ರಂಗನಾಥ ನಾಯಕ್, ಬುಡ್ಡಪ್ಪ, ಭಾಷಾ, ಹುಚ್ಚಪ್ಪ ಮುಂತಾದವರು ಇದ್ದರು.

## ಕರ್ನಾಟಕದಲ್ಲಿ ಈ ಬಾರಿ ಬೇಸಿಗೆಯಲ್ಲಿ ಬಿಸಿಲು ಹೆಚ್ಚಾಗುವ ಸಂಭವ

ನೈಜ್ಯ ದೆಸೆ ನ್ಯೂಸ್

**ರಾಜ್ಯದ ಬಹುತೇಕ ಭಾಗದಲ್ಲಿ ಈ ಬಾರಿ ಬೇಸಿಗೆಯಲ್ಲಿ ಬಿಸಿಲು ಹೆಚ್ಚಾಗಲಿದೆ. ವಾಡಿಕೆಗಿಂತ ಅಧಿಕ ಉಷ್ಣಾಂಶ ದಾಖಲಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಮಾರ್ಚ್ ನಿಂದ ತಾಪಮಾನ ಸಾಮಾನ್ಯಕಿಂತ ಹೆಚ್ಚಾಗಿರುತ್ತದೆ. ರಾಜ್ಯದ ಸಾಮಾನ್ಯಕ್ಕಿಂತ ಹೆಚ್ಚಿನ ತಾಪಮಾನ, ಕಡಿಮೆ ಶಾಖದ ಅಲೆ, ಬೆಚ್ಚಗಿನ ರಾತ್ರಿ ಇರುತ್ತದೆ.**



ಮಾರ್ಚ್ ಆರಂಭದಲ್ಲಿಯೇ ಬಿಸಿಲಿನ ತೀವ್ರತೆ ಹೆಚ್ಚಳವಾಗಲಿದೆ. ಕರಾವಳಿ ಭಾಗದಲ್ಲಿ ಗರಿಷ್ಠ ತಾಪಮಾನ ಶೇ. 65 ರಷ್ಟು ಹೆಚ್ಚಾಗುತ್ತದೆ. ರಾಜಧಾನಿ ಬೆಂಗಳೂರು ನಗರ ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ರಾತ್ರಿ ಹೊತ್ತು ಬಿಸಿ ವಾತಾವರಣ ಇರುತ್ತದೆ. ಕಲಬುರಗಿಯಲ್ಲಿ ಅತಿ ಹೆಚ್ಚು 45 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಬಹುದು. ಬಳ್ಳಾರಿ, ಬೀದರ್, ವಿಜಯಪುರ, ಕೊಪ್ಪಳ, ರಾಯಚೂರು, ಹಾವೇರಿ, ಧಾರವಾಡ, ಯಾದಗಿರಿ, ಚಿತ್ರದುರ್ಗ, ದಾವಣಗೆರೆ ಸೇರಿದಂತೆ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ 43 ಡಿಗ್ರಿ ಸೆಲ್ಸಿಯಸ್ ವರೆಗೆ ಉಷ್ಣಾಂಶ ದಾಖಲಾಗುವ ಸಂಭವ ಇದೆ, ಅದೇ ರೀತಿ ಮಂಡ್ಯ, ಮೈಸೂರು, ಹಾಸನ, ಚಾಮರಾಜನಗರ, ತುಮಕೂರು, ಬೆಂಗಳೂರು ದಕ್ಷಿಣ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ವ್ಯಾಪ್ತಿಯಲ್ಲಿ 40 ಡಿಗ್ರಿ ಸೆಲ್ಸಿಯಸ್ ವರೆಗೆ ಉಷ್ಣಾಂಶ ದಾಖಲಾಗುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ.

## ದಲಿತ ವಿದ್ಯಾರ್ಥಿ ಪರಿಷತ್ ತಾಲೂಕ ಘಟಕದ ವತಿಯಿಂದ ಮಹಿಳಾ ಜಾಗೃತಿ ಕುರಿತು ವಿಶೇಷ ಉಪನ್ಯಾಸ.

ನೈಜ್ಯ ದೆಸೆ ನ್ಯೂಸ್

**ನಿನ್ನೆಯ ದಿನ ಸಿಂಧನೂರಿನ ಕುಷ್ಟಗಿ ರಸ್ತೆಯಲ್ಲಿರುವ ಅಂಬೇಡ್ಕರ್ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯದಲ್ಲಿ ದಲಿತ ವಿದ್ಯಾರ್ಥಿ ಪರಿಷತ್ ತಾಲೂಕು ಸಮಿತಿ ಸಿಂಧನೂರು ವತಿಯಿಂದ ಮಹಿಳೆಯರ ಜಾಗೃತಿ ಪ್ರಯುಕ್ತ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ನಡೆಸಲಾಯಿತು.**



ಮೊದಲಿಗೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ವೇದಿಕೆ ಮೇಲಿರುವ ಗಣ್ಯರು ಮಾಲಾರ್ಪಣೆ ಮಾಡುವುದರ ಮುಖಾಂತರ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಪ್ರಾಸ್ತಾವಿಕವಾಗಿ ಸಮಿತಿಯ ಜಿಲ್ಲಾ ಸಂಚಾಲಕ ಮೌನೇಶ್ ಮೌನೇಶ ಜಾಲವಾಡಗಿ ಮಾತನಾಡಿ ದಲಿತ ವಿದ್ಯಾರ್ಥಿ ಪರಿಷತ್ ವಿದ್ಯಾರ್ಥಿ ಯುವಜನರ ಹಕ್ಕುಗಳನ್ನು ಅವರಿಗೆ ಪ್ರಾಮಾಣಿಕವಾಗಿ ಕೊಡಿಸುವ ನಿಟ್ಟಿನಲ್ಲಿ ನಿರಂತರ ಶ್ರಮಿಸುತ್ತಿದೆ ಜೊತೆಗೆ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಮತ್ತು ಸಾಮಾಜಿಕ ಜೀವನದಲ್ಲಿ ಅವರಿಗೆ ಎದುರಾಗುವ ಸವಾಲುಗಳು ಮತ್ತು ಸಂಕಷ್ಟಗಳ ವಿರುದ್ಧ ಹೋರಾಡಲು ಹಾಗೂ ಜಾಗೃತಗೊಳ್ಳಲು ಇಂತಹ ಕಾರ್ಯಕ್ರಮವನ್ನು ನಾವು ನಡೆಸುತ್ತಾ ಬಂದಿದ್ದೇವೆ ಎಂದರು.

ನಂತರ ವಿಶೇಷ ಉಪನ್ಯಾಸಕರಾಗಿ ಆಗಮಿಸಿದ ಶ್ರೀ ಲಿಂಗನಗೌಡ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಸಿಂಧನೂರು ಇವರು ಮಾತನಾಡಿ ವಿದ್ಯಾರ್ಥಿನಿಯರು ಶಿಕ್ಷಣಕ್ಕೆ ಮೊದಲ ಪ್ರಶಸ್ತಿ ನೀಡಿ ಬಾಬಾ ಸಾಹೇಬರ ಹಣತೆಯಂತೆ ಶಿಕ್ಷಣ ಎನ್ನುವುದು ಹುಲಿಯ ಹಾಲಿದ್ದಂತೆ ಅದನ್ನು ಕುಡಿದವರು ಗರ್ಜಿಸಲೇಬೇಕು. ಹಾಗಾಗಿ ಶಿಕ್ಷಣದಿಂದ ನಿಮ್ಮ ಜೀವನವನ್ನು ರೂಪಿಸಿಕೊಳ್ಳುವುದರ ಜೊತೆಗೆ ವಿಶೇಷವಾಗಿ ಮಹಿಳೆಯರು ಸಾಮಾಜಿಕ, ಶೈಕ್ಷಣಿಕ ಬದುಕಿನಲ್ಲಿ ಸ್ಪಷ್ಟವಾದ ಗುರಿಯನ್ನು ಹೊಂದಿರಬೇಕು, ಮತ್ತು ಮಹಿಳೆಯರ ಮೇಲೆ ನಡೆಯುವ ಹಲವಾರು ದೌರ್ಜನ್ಯಗಳನ್ನು ಮೆಟ್ಟಲು ಅವರಿಗೆ ಸರ್ಕಾರದ ವತಿಯಿಂದ ಹಲವಾರು ಕಾರ್ಯಕ್ರಮಗಳು ಅನುಷ್ಠಾನದಲ್ಲಿದ್ದು ಅವುಗಳ ಬಗ್ಗೆ ಅರಿವನ್ನು ಹೊಂದಿರಬೇಕು,.

ವಿದ್ಯಾರ್ಥಿನಿಯರು ಮಾನಸಿಕವಾಗಿ ಗಟ್ಟಿಯಾಗಿರಬೇಕು, ಮಹಿಳೆಯರಿಗೆ ನಮ್ಮ ಇಲಾಖೆಯಿಂದ ಒದಗಿಸುವ ಸೌಕರ್ಯಗಳನ್ನು ತಾವೆಲ್ಲರೂ ಪಡೆದುಕೊಂಡು ಉತ್ತಮ ಜೀವನವನ್ನು ಮುನ್ನಡೆಸಬೇಕೆಂದು ಎಂದರು. ನಂತರದಲ್ಲಿ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಶ್ರೀಮತಿ ಗೀತಾ ಹಿರೇಮಠ ಅವರು ವಿದ್ಯಾರ್ಥಿನಿಯರೊಂದಿಗೆ ಸಂವಾದ ನಡೆಸಿದರು. ಹಾಗೂ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ಶ್ರೀ ಶರಣಪ್ಪ ಗೋನಾಳ ಮಾತನಾಡಿದರು. ದಲಿತ ವಿದ್ಯಾರ್ಥಿ ಪರಿಷತ್ ತಾಲೂಕ್ ಅಧ್ಯಕ್ಷರಾದ ದುರ್ಗೇಶ ಕಲ್ಮಂಗಿ ನಿರೂಪಿಸಿದರು, ಪ್ರಧಾನ ಕಾರ್ಯದರ್ಶಿ ನರಸಪ್ಪ ಬಡಿಗೇರ್ ಸ್ವಾಗತ ಕೋರಿದರು. ಮತ್ತು ಈ ಸಂದರ್ಭದಲ್ಲಿ ತುರ್ವಿಹಾಳ ಯೋಜನೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾದ ಶ್ರೀ ಅಶೋಕ, ಸಿಂಧನೂರು ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘಟನೆಯ ಅಧ್ಯಕ್ಷರಾದ ಶ್ರೀ ವೆಂಕಟೇಶ ನಾಯಕ್, ಪತ್ರಕರ್ತರಾದ ಶ್ರೀ ವೀರೇಶ್ ಗಡ್ಡಿಮಾಳ ಹಾಗೂ ವಸತಿ ನಿಲಯದ ಸಿಬ್ಬಂದಿಗಳು ನೂರಾರು ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

## ಜಾಲಹಳ್ಳಿ ಗ್ರಾಮದ ಮಾನಸಿಕ ಅಸ್ವಸ್ಥಳಾಗಿದ್ದ ರಂಗಮ್ಮ ತಾಯಿ ದುರ್ಗಮ್ಮರನ್ನು ರಿಮ್ಸ್ ಆಸ್ಪತ್ರೆಗೆ ದಾಖಲಿಕೆ

ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮದಲ್ಲಿ ಹಲವು ದಿನಗಳಿಂದ ಮಾನಸಿಕ ಅಸ್ವಸ್ಥಳಾಗಿದ್ದ ರಂಗಮ್ಮ ತಾಯಿ ದುರ್ಗಮ್ಮ ಅವರನ್ನು ಹೆಚ್ಚಿನ ಚಿಕಿತ್ಸೆಗೆ ರಾಯಚೂರಿನ ರಿಮ್ಸ್ ಆಸ್ಪತ್ರೆಗೆ ದಾಖಲಿಸಲಾಯಿತು.**



ಈ ಕಾರ್ಯವನ್ನು ಜಾಲಹಳ್ಳಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ನರಸಪ್ಪ ಅವರ ನೇತೃತ್ವದಲ್ಲಿ ಗ್ರಾಮ ಪಂಚಾಯತ್ ಸಿಬ್ಬಂದಿ ಕೈಗೊಂಡರು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಪೊಲೀಸ್ ಇಲಾಖೆ ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿಯವರು ಸಹಕಾರ ನೀಡಿದರು. ಗ್ರಾಮ ಪಂಚಾಯತ್ ಸಿಬ್ಬಂದಿ ಯವರು ರಂಗಮ್ಮ ಅವರನ್ನು ಸ್ವಚ್ಛವಾಗಿ ತೊಳೆದು, ಜಾಲಹಳ್ಳಿಯ ಸರ್ಕಾರಿ ಆಸ್ಪತ್ರೆ ಅಂಬುಲೆನ್ಸ್ ಮೂಲಕ ರಿಮ್ಸ್ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಈ ವೇಳೆ ಶೇಷಮ್ಮ ಕುಮಾರ್ ಹನುಮಂತ ಹಾಗೂ ಪೊಲೀಸ್ ಸಿಬ್ಬಂದಿ ಸಹ ಆಶಾ ಕಾರ್ಯಕರ್ತೆ ಅಂಬುಲೆನ್ಸ್‌ನಲ್ಲಿ ಜೊತೆಗಿದ್ದರು.

ಈ ಸಮಾಜಸೇವಾ ಕಾರ್ಯದಲ್ಲಿ ಗ್ರಾಮ ಪಂಚಾಯತ್ ಸದಸ್ಯರಾದ ಮಖತುಂಭ ಪರಾಶಿ ಕುಮಾರ್ ಚಪ್ಪಳಕ್ಕಿ , ಮಾಜಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಅಯ್ಯಪ್ಪ ತಾತ ಹಾಗೂ ಊರಿನ ಗಣ್ಯರಾದ ರಂಗಪ್ಪ ತೊಗರಿ, ರಾಜು ತವಾಗ, ಹನುಮಂತ ಗಣೆಕಲ್, ಮೌನೇಶ ಎಲ್ಲಗಟ್ಟೆ ಸೇರಿದಂತೆ ಹಲವಾರು ಸಮಾಜಸೇವಕರು ಭಾಗವಹಿಸಿದರು. ಮಾನಸಿಕ ಅಸ್ವಸ್ಥಳಾಗಿದ್ದ ರಂಗಮ್ಮರನ್ನು ಚಿಕಿತ್ಸೆಗೆ ದಾಖಲಿಸಿರುವುದು ಗ್ರಾಮಸ್ಥರ ಮಾನವೀಯತೆ ಮತ್ತು ಸಾಮಾಜಿಕ ಹೊಣೆಗಾರಿಕೆಯನ್ನು ತೋರಿಸುವ ಶ್ಲಾಘನೀಯ ಕಾರ್ಯವಾಗಿದೆ.

# ನಿರಂತರ ಪರಿಶ್ರಮದಿಂದ ಸಾಧನೆ ಸಾಧ್ಯ: ಡಾ.ಪ್ರಭುಗೌಡ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಎಸ್ ಎಸ್ ಎಲ್ ಸಿ ಪರೀಕ್ಷೆಗಳು ಸಮೀಪಿಸುತ್ತಿವೆ ವಿದ್ಯಾರ್ಥಿಗಳು ವಿಚಲಿತರಾಗದೇ ಆತ್ಮವಿಶ್ವಾಸ ಬೆಳಸಿಕೊಂಡು ಧೈರ್ಯದಿಂದ ಪರೀಕ್ಷೆಯನ್ನು ಎದುರಿಸಬೇಕು ಎಂದು ಖ್ಯಾತ ನೇತ್ರ ತಜ್ಞ ಡಾ.ಪ್ರಭುಗೌಡ ಲಿಂಗದಳ್ಳಿ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.**



ಶನಿವಾರ ಪಟ್ಟಣದ ಶ್ರೀ ಸಂಗಮೇಶ್ವರ ಸಭಾಭವನದಲ್ಲಿ ಕರ್ನಾಟಕ ರಾಜ್ಯ ಪ್ರೌಢಶಾಲಾ ಸಹ ಶಿಕ್ಷಕರ ಸಂಘ ತಾಳಿಕೋಟಿ ತಾಲೂಕ ಘಟಕದ ಸಹಯೋಗದಲ್ಲಿ ಹಮ್ಮಿಕೊಂಡ 2025–26 ನೇ ಸಾಲಿನ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶ ಸುಧಾರಣೆಗಾಗಿ ಉಪನ್ಯಾಸ, ರಸಪ್ರಶ್ನೆ ಹಾಗೂ ವಯೋನಿವೃತ್ತಿ ಹೊಂದಿದ ಪ್ರೌಢಶಾಲಾ ಶಿಕ್ಷಕರ ಸನ್ಮಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ತಹಸಿಲ್ದಾರ್ ಡಾ. ವಿನಯಾ ಹೂಗಾರ ಅವರು ಮಾತನಾಡಿ ವಿದ್ಯಾರ್ಥಿಗಳು ಪರೀಕ್ಷೆಗಳು ಸಮೀಪಿ ಸುತ್ತಿರುವುರಿಂದ ಹೆಚ್ಚು ಓದದೇ ಇಲ್ಲಿಯವರೆಗೆ ಓದಿದ್ದನ್ನು ಪುನರಾವರ್ತಿಸಬೇಕು.

ರಾತ್ರಿಯಲ್ಲಿ ಹೆಚ್ಚು ಓದುವುದನ್ನು ಕಡಿಮೆ ಮಾಡಿ ಬೇಗ ಮಲಗಿ ಬೇಗ ಎದ್ದು ಓದುವ ಹವ್ಯಾಸ ಬೆಳೆಸಿಕೊಳ್ಳಿ ಆರೋಗ್ಯದ ಕಡೆಗೆ ಹೆಚ್ಚು ಕಾಳಜಿ ವಹಿಸಬೇಕು. ಶಿಕ್ಷಕರ ಪರಿಶ್ರಮದ ಜೊತೆ ನಿಮ್ಮ ಪ್ರಯತ್ನದಿಂದ ಫಲಿತಾಂಶ ಬರುತ್ತದೆ. ಈ ಬಾರಿ ತಾಲೂಕಿಗೆ ಒಳ್ಳೆಯ ಫಲಿತಾಂಶ ತರಲು ಎಲ್ಲರೂ ಪ್ರಯತ್ನಿಸಬೇಕಾಗಿದೆ ಎಂದರು. ಬಿಇಓ ಬಿ.ಎಸ್.ಸಾವಳಗಿ ಅವರು ಕಳೆದ ಬಾರಿಯ ಎಸ್ ಎಸ್ ಎಲ್ ಸಿ ಫಲಿತಾಂಶ ತೃಪ್ತಿಕರವಾಗಿಲ್ಲ ಈ ಬಾರಿ ಎರಡೂ ತಾಲೂಕಿನಲ್ಲಿ ಉತ್ತಮ ಫಲಿತಾಂಶ ತರಲು ಎಲ್ಲರೂ ಕೂಡಿ ಪ್ರಯತ್ನಿಸೋಣ, ವಿದ್ಯಾರ್ಥಿಗಳು ಧೈರ್ಯದಿಂದ ಪರೀಕ್ಷೆಗಳನ್ನು ಎದುರಿಸಿ ಖಂಡಿತ ಉತ್ತಮ ಫಲಿತಾಂಶದ ನಿರೀಕ್ಷೆ ಇದೆ ಎಂದರು.

ವಿಜಯಪುರ ಡೈಟ್ ಉಪನ್ಯಾಸಕ ಮುಜಾವರ, ಸಂಘದ ಜಿಲ್ಲಾ ಅಧ್ಯಕ್ಷ ಶಿವರಾಜ ಬಿರಾದಾರ ಹಾಗೂ ಸಂಘದ ತಾಲೂಕ ಅಧ್ಯಕ್ಷ ವೈ ಬಿ ಬಡಿಗೇರ ಮಾತನಾಡಿದರು. ಇದೇ ಸಂದರ್ಭದಲ್ಲಿ ವಯೋನಿವೃತ್ತ ಪ್ರೌಢಶಾಲಾ ಶಿಕ್ಷಕರಿಗೆ ಹಾಗೂ ಕಳೆದ ವರ್ಷ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ತೋರಿದ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು. ಎಸ್‌ಎಸ್ ವಿದ್ಯಾ ಸಂಸ್ಥೆ ಅಧ್ಯಕ್ಷ ಎಚ್ ಎಸ್ ಪಾಟೀಲ ಅಧ್ಯಕ್ಷತೆ ವಹಿಸಿದ್ದರು.ಶಿಕ್ಷಕರಾದ ಬಿ.ಐ.ಹಿರೆಹೋಳಿ,ಡಾ.ಇರಾಜ, ಸುವರ್ಣಾ ಗದುಗಿನಮಠ ಹಾಗೂ ಅಪ್ಪಾಸಾಹೇಬಗೌಡ ಮೂಲಿಮನಿ ಕಾರ್ಯಕ್ರಮ ನಿರ್ವಹಿಸಿದರು.

ಎಂಡಿಎಂ ಸಹಾಯಕ ನಿರ್ದೇಶಕ ಡಾ. ಎಂ.ಎಂ.ಬೆಳಗಲ್ಲ, ಇಸಿಓ ಆರ್.ಬಿ.ದಮ್ಮೂರಮಠ, ಉದ್ಯಮಿ ಪರಶುರಾಮ ಹಂಚಾಟೆ, ಎನ್.ಬಿ. ಪಿಂಜಾರ,ಕ.ರಾ.ಸ.ನೌ.ಸಂ. ತಾಲೂಕಾಧ್ಯಕ್ಷ ಎಸ್.ಬಿ.ಚೌದ್ರಿ,ನೋಡಲ್ ಅಧಿಕಾರಿ ಎಂ.ಕೆ.ಬಾಗವಾನ, ಶಿಕ್ಷಕಿ ಆರ್.ಜಿ. ದೇಸಾಯಿ, ಒಡೆಯರ್, ಅರ್ಜುನ ಮಲ್ಲೇ ವಾಡಿ, ಸಂತೋಷ ಕದಂ,ಸಚೀನ ಹಂಚಾಟೆ, ಬಾಪುಗೌಡ ಪಾಟೀಲ, ಸಿಆರ್ಸಿ ರಾಜು ವಿಜಾಪುರ, ಪ್ರೌಢಶಾಲಾ ಶಿಕ್ಷಕರ ಸಂಘ ತಾಲೂಕ ಘಟಕದ ಪದಾಧಿಕಾರಿ,ನಾಮ ನಿರ್ದೇಶಿತ ಪದಾಧಿಕಾರಿಗಳು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಇದ್ದರು. ವೇದಿಕೆ ಕಾರ್ಯಕ್ರಮದ ನಂತರ ವಿದ್ಯಾರ್ಥಿಗಳ ರಸಪ್ರಶ್ನೆ ಸ್ಪರ್ಧಾ ಕಾರ್ಯಕ್ರಮ ನಡೆಯಿತು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### Master of Veterinary Science) in Animal Genetics and Breeding

MVSc (Master of Veterinary Science) in Animal Genetics and Breeding ಎನ್ನುವುದು ಎಂ.ವಿ.ಎಸ್.ಸಿ. (Animal Genetics and Breeding) ಎಂಬುದು 2 ವರ್ಷದ ಪೂರ್ಣಕಾಲಿಕ ಸ್ನಾತಕೋತ್ತರ ಪದವಿ ಕೋರ್ಸ್ ಆಗಿದ್ದು, ವಿದ್ಯಾರ್ಥಿಗಳಿಗೆ ಪ್ರಾಣಿಗಳ ಪೋಷಕಾಂಶಗಳು ಹಾಗೂ ಇತರೆ ಜೀವಶಾಸ್ತ್ರ ವಿಷಯಗಳ ಕುರಿತು ಅಧ್ಯಯನ ಮಾಡುವ ಅವಕಾಶವನ್ನು ನೀಡುತ್ತದೆ. ಇದರಲ್ಲಿದೆ ಪೋಷಕಾಂಶ ವಿಜ್ಞಾನದ ಆರೋಗ್ಯಕ್ಕೆ ಅನ್ವಯ, ಜೀರ್ಣಕ್ರಿಯೆ ಪ್ರಕ್ರಿಯೆ, ಮತ್ತು ಸಾಕುಪ್ರಾಣಿಗಳ ಕಲ್ಯಾಣದ ಕುರಿತು ತಿಳುವಳಿಕೆ. ಈ ಕೋರ್ಸ್‌ನಲ್ಲಿ ಜೀವಶಾಸ್ತ್ರ ಮತ್ತು ರಸಾಯನಶಾಸ್ತ್ರದ ತತ್ವಗಳನ್ನು ಪ್ರಾಣಿಗಳ ನಿರ್ವಹಣೆ ಹಾಗೂ ಪ್ರಾಣಿ ಉತ್ಪನ್ನಗಳ ಉತ್ಪಾದನೆಯಲ್ಲಿ ಹೇಗೆ ಅನ್ವಯಿಸಬೇಕು ಎಂಬುದರ ಮೇಲೆ ಗಮನ ನೀಡಲಾಗುತ್ತದೆ. ಇದಲ್ಲದೆ ಪೋಷಕಾಂಶ ವಿಜ್ಞಾನ, ಜೈವರಸಾಯನಶಾಸ್ತ್ರ, ಪ್ರಾಣಿಶಾಸ್ತ್ರ, ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ, ಹ್ಯಾಚರಿ ವಿನ್ಯಾಸ (Hatchery Design) ಹಾಗೂ ಪ್ರಾಣಿಗಳ ಸುರಕ್ಷತೆ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ತರಬೇತಿ ನೀಡಲಾಗುತ್ತದೆ. ಈ ಕೋರ್ಸ್‌ಗೆ ಪ್ರವೇಶ ಪಡೆಯಲು ಅಭ್ಯರ್ಥಿಗಳು ವೆಟರಿನರಿ ಕೌನ್ಸಿಲ್ ಮಾನ್ಯತೆ ಪಡೆದ ಯಾವುದೇ ಸಂಸ್ಥೆ/ವಿಶ್ವವಿದ್ಯಾಲಯದಿಂದ ಪಶುವೈದ್ಯ ವಿಜ್ಞಾನದಲ್ಲಿ ಬ್ಯಾಚುಲರ್ ಪದವಿಯನ್ನು ಹೊಂದಿರಬೇಕು. ಕನಿಷ್ಠ 55% ಅಂಕಗಳು ಅಥವಾ 10 ಅಂಕಗಳ ಮಾನದಂಡದಲ್ಲಿ ಕನಿಷ್ಠ ಹೊಂದಿರಬೇಕು.ಪಶುವೈದ್ಯಕೀಯ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಯಾಗಿದೆ (Postgraduate degree). ಈ ಕೋರ್ಸ್ :MVSc in Animal Genetics and Breeding (ಪ್ರಾಣಿ ತಳಿಶಾಸ್ತ್ರ ಮತ್ತು ಸಂತಾನೋತ್ಪತ್ತಿ) ಅವಧಿ (Duration): 2 ವರ್ಷಗಳು (ಪೂರ್ಣಾವಧಿ – Full Time) ಅರ್ಹತೆ (Eligibility): ವಿಶ್ವವಿದ್ಯಾಲಯದಿಂದ B.V.Sc. & A.H. ಪದವಿ ಪ್ರವೇಶ ವಿಧಾನ (Admission): ಪ್ರವೇಶ ಪರೀಕ್ಷೆ ಆಧಾರಿತ (ಕರ್ನಾಟಕ ಪಶುವೈದ್ಯಕೀಯ, ಪ್ರಾಣಿ ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ) ದಂತಹ ಸಂಸ್ಥೆಗಳು ಪ್ರವೇಶ ಪರೀಕ್ಷೆ ನಡೆಸುತ್ತವೆ. ಈ ಕೋರ್ಸ್‌ನಲ್ಲಿ ಪ್ರಾಣಿಗಳ ತಳಿಶಾಸ್ತ್ರ (ಸಂತಾನೋತ್ಪತ್ತಿ, ಕ್ವಾಂಟಿ–ಟೇಟಿವ್ ಜೆನೆಟಿಕ್ಸ್, ಮತ್ತು ಜೀನೋಮಿಕ್ಸ್ (genomics) ಕುರಿತು ಅಧ್ಯಯನ ಮಾಡಲಾಗುತ್ತದೆ. ಕರ್ನಾಟಕದಲ್ಲಿ ಲಭ್ಯತೆ (ಬೆಂಗಳೂರು ಪಶುವೈದ್ಯಕೀಯ ಕಾಲೇಜು): ಈ ಕಾಲೇಜಿನಲ್ಲಿ MVSc ಕೋರ್ಸ್‌ಗಳು ಲಭ್ಯವಿವೆ. ಉದ್ಯೋಗಾವಕಾಶಗಳು ಪಶುಸಂಗೋಪನಾ ಇಲಾಖೆ ಕೃಷಿ ಮತ್ತು ಡೈರಿ ವಿಜ್ಞಾನ ಸಂಸ್ಥೆಗಳು (Agriculture & Dairy Research Institutes) ಪಶು ತಳಿ ಅಭಿವೃದ್ಧಿ ಕೇಂದ್ರಗಳು

### ಬಾಷುಮಿಯಾ ಸಾಹುಕಾರ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ನಲ್ಲಿ ಅಂತರರಾಷ್ಟ್ರೀಯ ಮಾತೃಭಾಷೆ ದಿನಾಚರಣೆ

# "ಕನ್ನಡ–ಕನ್ನಡಿಗ–ಕರ್ನಾಟಕ ಉಳಿಯಬೇಕು" :ಡಾ. ಜೆ.ಎಲ್. ಈರಣ್ಣ

ನೈಜ್ಯ ದೆಸೆ ನ್ಯೂಸ್

**ಮಾನ್ವಿ ನಗರದ ಬಾಷುಮಿಯಾ ಸಾಹುಕಾರ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ನಲ್ಲಿ ಫೆಬ್ರವರಿ 21ರಂದು ಅಂತರರಾಷ್ಟ್ರೀಯ ಮಾತೃಭಾಷೆ ದಿನವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು, ಉಪನ್ಯಾಸಕರು ಮತ್ತು ಸಿಬ್ಬಂದಿ ವರ್ಗದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಮಾತೃಭಾಷೆಯ ಮಹತ್ವವನ್ನು ಸಾರಿದರು.**



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಂಶುಪಾಲರಾದ ಡಾ. ಜೆ. ಎಲ್. ಈರಣ್ಣ ಅವರು, "ಭಾಷೆ ಎಂಬುದು ಕೇವಲ ಸಂವಹನದ ಸಾಧನ ಮಾತ್ರವಲ್ಲ, ಅದು ಸಂಸ್ಕೃತಿ, ಪರಂಪರೆ ಮತ್ತು ನಮ್ಮ ಗುರುತಿನ ಪ್ರತೀಕ. ಮಾತೃಭಾಷೆಯಲ್ಲಿಯೇ ಮನುಷ್ಯನ ಚಿಂತನೆಗಳು ಗಟ್ಟಿಯಾಗುತ್ತವೆ. ಆದ್ದರಿಂದ ಪ್ರಾಥಮಿಕ ಹಂತದಲ್ಲೇ ಶಿಕ್ಷಣ ಮಾತೃಭಾಷೆಯಲ್ಲಿ ನೀಡಬೇಕು" ಎಂದು ಅಭಿಪ್ರಾಯಪಟ್ಟರು. ಕನ್ನಡದ ಬಗ್ಗೆ ಪ್ರೀತಿ, ಗೌರವ ಮತ್ತು ಅಭಿಮಾನವನ್ನು ಪ್ರತಿಯೊಬ್ಬ ವಿದ್ಯಾರ್ಥಿಯೂ ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದ ಅವರು, "ಕರ್ನಾಟಕದಲ್ಲಿ ಕನ್ನಡ ಉಳಿದರೆ ನಮ್ಮ ಸಂಸ್ಕೃತಿ, ನಮ್ಮ ಅಸ್ತಿತ್ವ, ನಮ್ಮ ಐತಿಹಾಸಿಕ ಪರಂಪರೆ ಎಲ್ಲವೂ ಉಳಿಯುತ್ತವೆ" ಎಂದು ಹೇಳಿದರು.

ಆಂಗ್ಲ ಭಾಷಾ ವಿಭಾಗದ ಮುಖ್ಯಸ್ಥರಾದ ಸೈಯದ್ ಮುಜೀಬ್ ಅಹ್ಮದ್ ಅವರು ತಮ್ಮ ಪ್ರಸ್ತಾವಿಕ ನುಡಿಯಲ್ಲಿ 1952ರಲ್ಲಿ Bangladesh ನಲ್ಲಿ ನಡೆದ ಭಾಷಾ ಹೋರಾಟದ ಹಿನ್ನೆಲೆಯನ್ನು ವಿವರಿಸಿದರು. ವಿದ್ಯಾರ್ಥಿಗಳು ತಮ್ಮ ಮಾತೃಭಾಷೆಗಾಗಿ ಪ್ರಾಣತ್ಯಾಗ ಮಾಡಿದ ಘಟನೆಯನ್ನು ಸ್ಮರಿಸಿ, ಆ ಹೋರಾಟದ ಮಹತ್ವವನ್ನು ವಿಶ್ವ ಮಟ್ಟದಲ್ಲಿ ಗುರುತಿಸಿ UNESCO 1999ರಲ್ಲಿ ಫೆಬ್ರವರಿ 21 ಅನ್ನು ಅಂತರರಾಷ್ಟ್ರೀಯ ಮಾತೃಭಾಷೆ ದಿನವೆಂದು ಘೋಷಿಸಿದೆ ಎಂದು ತಿಳಿಸಿದರು. 2000ರಿಂದ ಈ ದಿನವನ್ನು ಜಾಗತಿ–ಕವಾಗಿ ಆಚರಿಸಲಾಗುತ್ತಿದೆ ಎಂದರು. ಕಾರ್ಯಕ್ರಮವು ಆಂತರಿಕ ಗುಣಮಟ್ಟ ಭರವಸಾ ಕೋಶ (IQAC) ಮತ್ತು ಆಂಗ್ಲ ಭಾಷಾ ವಿಭಾಗದ ಸಂಯುಕ್ತ ಆಶ್ರಯದಲ್ಲಿ ನಡೆಯಿತು. ವಿದ್ಯಾರ್ಥಿಗಳು ಭಾಷೆಯ ಮಹತ್ವದ ಕುರಿತು ಭಾಷಣ, ಕವನ ವಾಚನ ಹಾಗೂ ವಿಚಾರ ಸಂಕಿರಣಗಳ ಮೂಲಕ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ಪ್ರಾಧ್ಯಾಪಕರಾದ ಸೈಯದ್ ಮಿನ್ಹಾಜ್ ಉಲ್ ಹಸನ್, ರವಿ ಎಂ., ಚನ್ನಬಸವ ಮಾಡಗಿರಿ, ಶಶಿಧರ್, ಚನ್ನಬಸಪ್ಪ ಸೇರಿದಂತೆ ವಿವಿಧ ವಿಭಾಗಗಳ ಉಪನ್ಯಾಸಕರು ಉಪಸ್ಥಿತರಿದ್ದು ಕಾರ್ಯಕ್ರಮಕ್ಕೆ ಮತ್ತಷ್ಟು ಮೆರುಗು ತಂದರು. ಕಾರ್ಯಕ್ರಮದ ನಿರೂಪಣೆ ಹಾಗೂ ಸ್ವಾಗತವನ್ನು ಕನ್ನಡ ವಿಭಾಗದ ಬಸವರಾಜ ಸುಂಕೇಶ್ವರ ಅವರು ನೆರವೇರಿಸಿದರು. ಇತಿಹಾಸ ವಿಭಾಗದ ಮಲ್ಲಿಕಾರ್ಜುನ ಮಡಿವಾಳ ಅವರು ವಂದನಾರ್ಪಣೆ ಸಲ್ಲಿಸಿ ಕಾರ್ಯಕ್ರಮವನ್ನು ಸಮಾಪಿಸಿದರು. ಈ ಆಚರಣೆ ಮೂಲಕ ವಿದ್ಯಾರ್ಥಿಗಳಲ್ಲಿ ಮಾತೃಭಾಷೆಯ ಬಗ್ಗೆ ಜಾಗೃತಿ ಮೂಡಿಸುವುದರ ಜೊತೆಗೆ ಕನ್ನಡದ ಬೆಳವಣಿಗೆಗೆ ಪ್ರತಿಯೊಬ್ಬರೂ ತಮ್ಮದೇ ಆದ ಕೊಡುಗೆ ನೀಡಬೇಕು ಎಂಬ ಸಂದೇಶವನ್ನು ಹಂಚಲಾಯಿತು.

# ಆನೆಕಾಲು ರೋಗ ನಿಯಂತ್ರಣಕ್ಕೆ ರಾತ್ರಿ ರಕ್ತಲೇಪನ ಸಂಗ್ರಹ: ಸಾರ್ವಜನಿಕರಲ್ಲಿ ಜಾಗೃತಿ





ನೈಜ್ಯ ದೆಸೆ ನ್ಯೂಸ್

**ಸಿಂಧನೂರ: ಆನೆಕಾಲು ರೋಗಮುಕ್ತ ಸಮಾಜ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಮುನ್ನೆಚ್ಚ–ರಿಕಾ ಕ್ರಮವಾಗಿ, ತಾಲೂಕಿನ ಗಾಂಧಿನಗರ ಗ್ರಾಮದಲ್ಲಿ ತಡರಾತ್ರಿ 10:00 ಮೇಲ್ಪಟ್ಟು ಕಾರ್ಯಕ್ರಮ ಹಮ್ಮಿಕೊಂಡಿದ್ದ 'ರಾತ್ರಿ ರಕ್ತಲೇಪನ ಸಂಗ್ರಹ' (Night Blood Survey) ಕಾರ್ಯಕ್ರಮವು ಯಶಸ್ವಿಯಾಗಿ ಜರುಗಿತು. ಸೊಳ್ಳೆಗಳಿಂದ ಹರಡುವ ಆನೆಕಾಲು ರೋಗವು (Lymphatic Filariasis) ವ್ಯಕ್ತಿಯ ಜೀವನದ ದಕ್ಷತೆಯನ್ನು ಕುಂದಿಸುತ್ತದೆ.**

ಈ ರೋಗದ ಕಾರಕವಾದ 'ಮೈಕ್ರೋಫೈಲೇರಿಯಾ' ಪರಾವಲಂಬಿ ಜೀವಿಗಳು ಕೇವಲ ರಾತ್ರಿಯ ವೇಳೆಯಲ್ಲಿ ಮನುಷ್ಯನ ರಕ್ತದ ಪರಿಚಲನೆಯಲ್ಲಿ ಕಾಣಿಸಿಕೊಳ್ಳುತ್ತವೆ. ಈ ಹಿನ್ನೆಲೆಯಲ್ಲಿ ನಿಖರವಾದ ರೋಗ ಪತ್ತೆಗಾಗಿ ರಾತ್ರಿ ಸಮಯದಲ್ಲಿಯೇ ರಕ್ತದ ಮಾದರಿಗಳನ್ನು ಸಂಗ್ರಹಿಸುವುದು ಅತ್ಯಂತ ಅವಶ್ಯಕವಾಗಿದೆ ಎಂದು ತಾಲೂಕಾ ವಿ.ಬಿ.ಡಿ.ಟಿ.ಎಸ್–ಎಫ್.ಎ.ಹಣಗಿ ಈ ಸಂದರ್ಭದಲ್ಲಿ ತಿಳಿಸಿದರು.


ಗಾಂಧಿನಗರ ಗ್ರಾಮದಲ್ಲಿ ನಡೆದ ಈ ಕಾರ್ಯಕ್ಕೆ ತಾಲೂಕಾ ವಿ.ಬಿ.ಡಿ (VBD) ಮೇಲ್ವಿಚಾರಕರು ಮತ್ತು ಎಪಿಡೆಮಿಯಾಲಜಿಸ್ಟ್ ಕು.ನಿಖಿಲ್ (Epidemiologist) ಅವರು ಭೇಟಿ ನೀಡಿ ಮಾರ್ಗದರ್ಶನ ನೀಡಿದರು. ಸ್ಥಳೀಯ ಹಿರಿಯ ಆರೋಗ್ಯ ಸಹಾಯಕರಾದ ಸಂಗನಗೌಡ ಅವರ ನೇತೃತ್ವದಲ್ಲಿ ತಂಡವು ಮನೆ ಮನೆಗೆ ಭೇಟಿ ನೀಡಿ ಸಾರ್ವಜನಿಕರ ರಕ್ತದ ಮಾದರಿಯನ್ನು ಸಂಗ್ರಹಿಸಿತು. ಈ ಕಾರ್ಯಾಚರಣೆಯಲ್ಲಿ ಪ್ರಾ.ಆರೋಗ್ಯ ಕೇಂದ್ರದ ಅಧಿಕಾರಿಗಳು, ಹೆಚ್.ಐ.ಓ (HIO), ಪಿ.ಹೆಚ್.ಸಿ.ಓ (PHCO) ಹಾಗೂ ಸಮುದಾಯ ಆರೋಗ್ಯ ಅಧಿಕಾರಿಗಳು (CHO) ಮತ್ತು ಆಶಾ. ಕಾ.ಕರ್ತೆಯರು ಸಕ್ರಿಯವಾಗಿ ಪಾಲ್ಗೊಂಡಿದ್ದರು.

## ಮಸ್ಕಿ ತಾಲೂಕಿನ ಬೆಳ್ಳಿಗನೂರಿನಲ್ಲಿ ಕಲುಷಿತ ಕುಡಿಯುವ ನೀರು ಪೂರೈಕೆ ಗ್ರಾಮಸ್ಥರಿಗೆ ವಾಂತಿ–ಭೇದಿ, ಗ್ರಾಮಸ್ಥರ ಆಕ್ರೋಶ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ತಾಲೂಕಿನ ಬೆಳ್ಳಿಗನೂರು ಗ್ರಾಮದಲ್ಲಿ ಕುಡಿಯುವ ನೀರಿನ ಪೈಪ್ ಹೊಡೆದು ತಿಂಗಳುಗಳೇ ಕಳೆದರೂ ಗ್ರಾ.ಪಂ ಅಧಿಕಾ–ರಿಗಳು ದುರಸ್ತಿ ಕಾರ್ಯ ಕೈಗೊಂಡಿಲ್ಲ. ಹೊಡೆದ ಪೈಪ್ ಮೂಲಕ ಕಲುಷಿತ ನೀರು ಮಿಶ್ರಣವಾಗಿ ಅದೇ ನೀರು ಗ್ರಾಮಸ್ಥರಿಗೆ ಪೂರೈಸಿದ್ದರಿಂದ ವಾಂತಿ–ಭೇದಿ ಶುರುವಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಗ್ರಾಮಸ್ಥ ಡಿಎಸ್–ಎಸ್ ಮುಖಂಡ ವಂದಾಲಪ್ಪ ತಿಳಿಸಿದರು.**

ಈ ಬಗ್ಗೆ ಗ್ರಾಮ ಪಂಚಾಯತ್ ಪಿಡಿಓ ಅವರ ಗಮನಕ್ಕೆ ತಂದರೂ ಯಾವುದೇ ಪ್ರಯೋಜಜವಾಗಿಲ್ಲ. ಅಶುದ್ಧ ನೀರು ಸೇವನೆಯ ಪರಿಣಾಮವಾಗಿ ಗ್ರಾಮದಲ್ಲಿ ವಾಂತಿ, ಭೇದಿ, ಜ್ವರ ಸೇರಿದಂತೆ ಹಲವು ರೋಗಗಳು ಕಾಣಿಸಿಕೊಳ್ಳುತ್ತಿವೆ. ಮಕ್ಕಳು ಮತ್ತು ವೃದ್ಧರು ಹೆಚ್ಚು ಸಂಕಷ್ಟ ಅನುಭವಿಸುತ್ತಿದ್ದು, ಹಲವಾರು ಜನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸುಮಾರು 400ಕ್ಕೂ ಹೆಚ್ಚು ಕುಟುಂಬಗಳು ವಾಸಿಸುವ ಈ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಕೊರತೆ ಗಂಭೀರ ಸಮಸ್ಯೆಯಾಗಿದೆ. ಈ ಬಗ್ಗೆ ಗ್ರಾಮದ ನಿವಾಸಿಗಳು ನೀರು ಸರಬರಾಜು ಮಾಡುವ ಪೈಪ್ ಹೊಡೆದು ಒಡೆದು ತಿಂಗಳುಗಳು ಕಳೆದರೂ ಅಧಿಕಾರಿಗಳು ದುರಸ್ತಿ ಕಾರ್ಯಕೈಗೊಳ್ಳದೇ ನಿರ್ಲಕ್ಷ್ಯ ತೋರಿಸುತ್ತಿದ್ದಾರೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.



# ಶಿವಶರಣರ ಆದರ್ಶಗಳ ಅನುಸರಣೆ ಅಗತ್ಯ; ನಾವದಗಿ ಶ್ರೀಗಳು



ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಸಮಾಜವನ್ನು ಆಧ್ಯಾತ್ಮಿಕವಾಗಿ ಸಂಸ್ಕ–ರಿಸಲು ಈ ಜಗತ್ತಿಗೆ ಬಂದು ಎಲ್ಲಾ ದಾರ್ಶನಿಕರು ಸಂತ ಶರಣ ಶರಣೇಯರು ಸಾಕಷ್ಟು ತ್ಯಾಗಗಳನ್ನು ಮಾಡಿದ್ದಾರೆ ಅವರ ಬದುಕಿನ ಆದರ್ಶಗಳು ನಮಗೆಲ್ಲ–ರಿಗೂ ಮಾದರಿಯಾಗಬೇಕಾಗಿದೆ ಎಂದು ನಾವದಗಿ ಬ್ರಹನ್ಮಠದ ಷ.ಬ್ರ.ರಾಜಗುರು ರಾಜೇಂದ್ರ ಒಡೆಯರ್ ಶಿವಾಚಾರ್ಯರ ಮಹಾಸ್ವಾಮಿಗಳು ಹೇಳಿದರು.**

ತಾಲೂಕಿನ ನಾವದಗಿ ಗ್ರಾಮ ಬ್ರಹನ್ಮಠದ ಪೂಜ್ಯರ ದ್ವಿತೀಯ ವಾರ್ಷಿಕೋತ್ಸವದ ಪ್ರಯುಕ್ತ ಹಮ್ಮಿಕೊಂಡಿರುವ ಪುರಾಣ ಕಾರ್ಯಕ್ರಮದಲ್ಲಿ ಗುಡ್ಡಾಪುರದ ಶ್ರೀ ದಾನಮ್ಮ ದೇವಿಯ ವಿವಾಹ ಸಮಾರಂಭದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಮಹಾ ಶಿವಶರಣೆ ದಾನಮ್ಮದೇವಿಯ ವಿವಾಹವು ಸಂಗ ಗ್ರಾಮದ ಪರಮಶಿವ ಭಕ್ತ ಸಂಗಮನಾಥನೊಂದಿಗೆ ನೆರವೇರಿತು ಇವರು ಪತ್ನಿ ದಾನಮ್ಮ ದೇವಿಯ ಎಲ್ಲ ಧರ್ಮಕಾರ್ಯಗಳಲ್ಲಿ ಜೀವನದುದ್ದಕ್ಕೂ ಜೊತೆಯಾಗಿ ನಿಂತರು. ಇಂಥಹ ಮಹಾನ್ ಶಿವಶರಣೇಯ ಜೀವನ ಚರಿತ್ರೆಯನ್ನು ತಿಳಿದುಕೊಳ್ಳುವ ಅವಕಾಶ ನಿಮಗೆಲ್ಲ–ರಿಗೂ ಸಿಕ್ಕಿರುವುದು ಪೂರ್ವ ಜನುಮದ ಪುಣ್ಯದ ಫಲವಾಗಿದೆ ನಮ್ಮ ತಾಯಂದಿರು ದಾನಮ್ಮ ತಾಯಿಯ ಸದ್ಗುಣಗಳನ್ನು ತಮ್ಮಲ್ಲಿ ಬೆಳೆಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಶ್ರೀ ದಾನಮ್ಮ ದೇವಿಯ ವಿವಾಹವನ್ನು ಶಾಸ್ತ್ರೋತ್ರವಾಗಿ ನೆರವೇರಿಸಲಾಯಿತು. ವೇದಿಕೆಯಲ್ಲಿ ಮಿಣಜಗಿ ಗ್ರಾಮದ ವೇ.ಮೂ.ಡಾ. ಸೋಮಶೇಖರಯ್ಯ ಹಿರೇಮಠ, ಸಾಹಿತಿ ಬಸವರಾಜ ಗೊರಜಿ,ಪುರಾಣಿಕ ವೇ.ಮೂ.ರಾಚಯ್ಯ ಹಿರೇಮಠ ಹಾಗೂ ಕಾರ್ಯಕ್ರಮದಲ್ಲಿ ಗ್ರಾಮದ ಗಣ್ಯರು ಹಿರಿಯರು ಹಾಗೂ ಮಹಿಳೆಯರು ಉಪಸ್ಥಿತರಿದ್ದರು.

## ಅಗ್ನಿಪಥ್ ನೇಮಕಾತಿ ಕುರಿತು ಮಹತ್ವದ ಅಪ್‌ಡೇಟ್

ನೈಜ್ಯ ದೆಸೆ ನ್ಯೂಸ್

**ಕರ್ನಾಟಕ ಅಭ್ಯರ್ಥಿಗಳಿಗೆ ಅಗ್ನಿಪಥ್ ನೇಮಕಾತಿ ಕುರಿತು ಮಹತ್ವದ ಅಪ್‌ಡೇಟ್ ಒಂದಿದೆ. ಬೆಂಗಳೂರಿನ ಕೇಂದ್ರ ಕಚೇರಿ ನೇಮಕಾತಿ ವಲಯದ ಅಡಿಯಲ್ಲಿ ಬರುವ ಬೆಳಗಾವಿಯ ಸೇನಾ ನೇಮಕಾತಿ ಕಚೇರಿಯಿಂದ ರಾಜ್ಯದ ವಿವಿಧ ಜಿಲ್ಲೆಗಳ ಅಭ್ಯರ್ಥಿಗಳಿಂದ ಅಗ್ನಿಪಥ್ ನೇಮಕಾತಿಗಾಗಿ ಆಸಕ್ತ ಪುರುಷ ಅಭ್ಯರ್ಥಿಗಳಿಂದ ನೋಂದಣಿಗೆ ಸೂಚನೆ ನೀಡಲಾಗಿದೆ.**



ಬೆಳಗಾವಿ, ಬೀದರ್, ಕಲಬುರಗಿ, ಕೊಪ್ಪಳ, ರಾಯಚೂರು ಹಾಗೂ ಯಾದಗಿರಿ ಜಿಲ್ಲೆಯ ಪುರುಷ ಅಭ್ಯರ್ಥಿಗಳು ಸ್ವಯಂ ಪ್ರೇರಿತರಾಗಿ ಅಗ್ನಿಪಥ್ ನೇಮಕಾತಿಗಾಗಿ ನೋಂದಣಿ ಮಾಡಿಕೊಳ್ಳಬಹುದು. ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಳ್ಳಲು ಏಪ್ರಿಲ್ 1 ಕೊನೆಯ ದಿನವಾಗಿದೆ. ಅಗ್ನಿವೀರ ಜೆನರಲ್ ಡ್ಯೂಟಿ, ಅಗ್ನಿವೀರ ಟೆಕ್ನಿಕಲ್, ಅಗ್ನಿವೀರ ಟ್ರೇಡ್‌ಮೆನ್ (10ನೇ ತರಗತಿ ಉತ್ತೀರ್ಣ), ಅಗ್ನಿವೀರ ಟ್ರೇಡ್‌ಮೆನ್ (8ನೇ ತರಗತಿ ಉತ್ತೀರ್ಣ), ಅಗ್ನಿವೀರ್ ಕ್ಲರ್ಕ್/ ಸ್ಟೋರ್ ಕೀಪರ್ ಟೆಕ್ನಿಕಲ್ ಹುದ್ದೆಗಳ ನೇಮಕಾತಿ ನಡೆಯಲಿದೆ. ಅಭ್ಯರ್ಥಿಗಳಿಗೆ ವಯೋಮಿತಿ ಹದಿನೇಳೂವರೆ ವರ್ಷದಿಂದ 22 ವರ್ಷಗಳು. ವಿದ್ಯಾರ್ಹತೆ ಮತ್ತು ಇತರೆ ಮಾನದಂಡಗಳ ವಿವರಗಳನ್ನು ಬೆಳಗಾವಿ ಸೇನಾ ನೇಮಕಾತಿ ಹೊರಡಿಸಿದ ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಮಾತ್ರ ನೋಂದಣಿ ಮಾಡಿಕೊಳ್ಳಬೇಕಿದೆ. ಇದಕ್ಕಾಗಿ ಭಾರತೀಯ ಸೇನಾ ವೆಬ್‌ಸೈಟ್ www.joinindianarmy.nic.in ಭೇಟಿ ನೀಡಿ.

# ಫೆಬ್ರವರಿ 25ರಂದು ತಾಳಿಕೋಟಿ ಸಂಪೂರ್ಣ ಬಂದಗೆ ಕರೆ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಮೇಲೆಶ್ವರ ಗ್ರಾಮದ ಹತ್ತಿರ ಪ್ರಜಾಸೌಧ ನಿರ್ಮಾಣಕ್ಕೆ ಆಯ್ಕೆ ಮಾಡಿದ ಸ್ಥಳ ಪಟ್ಟಣದಿಂದ 4 ರಿಂದ 5 ಕಿ ಮೀ ದೂರ ಇರುವುದರಿಂದ ತಾಲೂಕಿನ ಸಾರ್ವಜನಿಕರಿಗೆ ತುಂಬಾ ಅನಾನುಕೂಲವಾಗುತ್ತದೆ ಇದನ್ನು ರದ್ದು ಪಡಿಸಿ ತಾಳಿಕೋಟಿ ಪಟ್ಟಣದಲ್ಲಿಯೇ ಪ್ರಜಾಸೌಧ ನಿರ್ಮಾಣ ಮಾಡಬೇಕೆಂದು ಒತ್ತಾಯಿಸಿ ತಾಳಿಕೋಟಿ ತಾಲೂಕ ಹೋರಾಟ ಸಮಿತಿಯ ಪದಾಧಿಕಾರಿಗಳು ಶುಕ್ರವಾರ ವಿಠ್ಠಲ ಮಂದಿರದಲ್ಲಿ ಕರೆದ ಪಟ್ಟಣದ ಸರ್ವ ಸಮಾಜದ ಗಣ್ಯರ ಹಾಗೂ ವ್ಯಾಪಾರಸ್ಥರ, ಅಸೋಷಿಯೇಷನಗಳ**



ಪೂರ್ವಬಾವಿ ಸಭೆಯಲ್ಲಿ ಫೆಬ್ರವರಿ 25ರಂದು ಸ್ವಯಂ ಪ್ರೇರಿತ ಸಂಪೂರ್ಣ ಬಂದಗೆ ಕರೆ ನೀಡಿ ಅಂದಿನಿಂದಲೇ ಅನಿರ್ದಿಷ್ಟಾವಧಿಯವರೆಗೆ ಧರಣಿ ಸತ್ಯಾಗ್ರಹ ಆರಂಭಿಸುವುದಾಗಿ ನಿರ್ಣಯಿಸಿದರು.

ಸಭೆಯಲ್ಲಿ ಹೋರಾಟ ಸಮಿತಿಯ ಪ್ರಮುಖರಾದ ಕಾಶಿನಾಥ ಮುರಾಳ, ಹಾಗೂ ವಿಜಯಸಿಂಗ್ ಹಜೇರಿ, ರವಿ ಕಟ್ಟಿಮನಿ ಅವರು ಮಾತನಾಡಿ ಅಂದು ಮುಂಜಾನೆ 10 ಗಂಟೆಗೆ ಅಂಬೇಡ್ಕರ್ ವೃತದಿಂದ ಬೃಹತ್ ಮೆರವಣಿಗೆ ಮೂಲಕ ಪಟ್ಟಣದ ಪ್ರಮುಖ ಬೀದಿಗಳ ಮೂಲಕ ಬಸವೇಶ್ವರ ವೃತ್ತಕ್ಕೆ ತಲುಪಿ ಅಲ್ಲಿಯೇ ಧರಣಿ ಆರಂಭಿಸಲಾಗುವುದು ಇದಕ್ಕೆ ಸರ್ವ ಸಮಾಜದವರೂ ಜ್ಯಾತ್ಯತೀತವಾಗಿ, ಪಕ್ಷಾತೀತವಾಗಿ ಈ ಹೋರಾಟಕ್ಕೆ ಸಹಕರಿಸಬೇಕೆಂದು ಕೇಳಿಕೊಂಡರು. ಸಭೆಯಲ್ಲಿ ಕಾರ್ಯಕ್ರಮದ ವಿವಿಧ ಜವಾಬ್ದಾರಿಗಳನ್ನು ವಹಿಸಿಕೊಡಲಾಯಿತು.

ಈ ಸಂದರ್ಭದಲ್ಲಿ ಹೋರಾಟ ಸಮಿತಿಯ ಗೌರವ ಅಧ್ಯಕ್ಷರಾದ ಎಸ್.ಬಿ. ಕಟ್ಟಿಮನಿ, ಅಧ್ಯಕ್ಷರಾದ ದಶರತಸಿಂಗ್ ಮನಗೂಳಿ, ಉಪಾಧ್ಯಕ್ಷರಾದ ಎಂ.ಕೆ.ಚೋರಗಸ್ತಿ, ಮುತ್ತಪ್ಪ ಚಮಲಾಪುರ, ಮಾಸೂಮಸಾಬ ಕೆಂಭಾವಿ, ಪರಶುರಾಮ ತಂಗಡಗಿ, ವೆಂಕಣ್ಣ ತಾಳಪಲ್ಲೆ, ಎಂ.ಆರ್. ಕತ್ತಿ, ಶರಣಗೌಡ ಪಾಟೀಲ, ಪ್ರಕಾಶ ಹಜೇರಿ, ತಿಪ್ಪಣ್ಣ ಸಜ್ಜನ, ಚನ್ನಬಸ್ಸು ದೇಸಾಯಿ, ತಿರುಪತಿ ನವಲೆ, ಶ್ರೀಶೈಲ್ ಬಬಲೇಶ್ವರ, ಮನೋಹರ ಪತ್ತಾರ, ಗಂಗಾಧರ ಕಸ್ತೂರಿ, ಮಂಜು ಶೆಟ್ಟಿ, ಸಿರಸಕುಮಾರ ಹಜೇರಿ, ಸುರೇಶ ಹಜೇರಿ, ಅಮಿತ್ ಮನಗೂಳಿ, ಶ್ರೀನಿವಾಸ್ ಸೋನಾರ್, ರಾಮಪ್ಪ ಕಟ್ಟಿಮನಿ, ಜುಮ್ಮಣ್ಣ ನಾಲತವಾಡ ಯಂಕಪ್ಪ ಗೊಲ್ಲರ, ಸಂಜು ಬರದೇನಾಳ, ನಾರಾಯಣ ಹಿಂಗಮೋರೆ, ಬಸ್ಸು ಕೊಡೇಕಲ್, ಹಾಗೂ ಸರ್ವ ಸಮಾಜದ ಮುಖಂಡರು ಉಪಸ್ಥಿತರಿದ್ದರು.